ಸಂಪುಟ : 8 ಸಂಚಿಕೆ : 165 ಪುಟ : 4 ಬೆಲೆ : 3.00 ಗುರುವಾರ ಆಗಸ್ಟ್ 02, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 8 Issue : 165 Pages : 4 Price : 3.00 Thursday August 03, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25




## ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ ನಾಳೆ

■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ನವನಗರದ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನವನ್ನು ಆಗಸ್ಟ್ 4ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ದೇಶಪಾಂಡೆ ನಗರದ ವಾಕ್ ಫೂಡ್ಸ್&ಬೆವರೇಜ್ಸ್ ಇಂಡಿಯಾ ಪ್ರೈ.ಲಿ.ನಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಸಂಸ್ಥೆಯಲ್ಲಿ ಖಾಲಿ ಇರುವ ಸೆಲ್ಸ್ ಮ್ಯಾನೇಜರ್, ಕೌಂಟರ್ ಸೇಲ್ಸ್ ಇನ್‌ಚಾರ್ಜ್, ಸ್ಟೋರ್ ಇನ್‌ಚಾರ್ಜ್ ಮತ್ತು ಹೌಸ್‌ಕೀಪಿಂಗ್ ಹುದ್ದೆಗಳಿಗೆ ಅಭ್ಯರ್ಥಿಗಳ ನೇರ ಸಂದರ್ಶನ ನಡೆಸಲಿದ್ದಾರೆ.

ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಯಾವುದೇ ಪದವಿ ಹೊಂದಿರುವ 18ರಿಂದ 35 ವಯೋಮಿತಿಯೊಳಗಿನ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಬಹುದು. ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳು https://forms.gle/zYvNUfzyoDD7oCj67 ವೆಬ್‌ಸೈಟ್ ಮುಖಾಂತರ ನೋಂದಣಿ ಮಾಡಿಕೊಂಡು ಹಾಜರಾಗಬೇಕು.

ಅಭ್ಯರ್ಥಿಗಳು ತಮ್ಮ 1 ಭಾವಚಿತ್ರ, ಆಧಾರ್ ಕಾರ್ಡ್, ಬಯೋಡಾಟಾ (ರೆಸ್ಯೂಮ್)ಗಳ ಹೆಚ್ಚಿನ ಪ್ರತಿಗಳೊಂದಿಗೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 0836–2225288, 9806905751 ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೀರು ಪೂರೈಕೆಯಲ್ಲಿ ವ್ಯತ್ಯಯ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ಮುಂಡರಗಿ ತಾಲೂಕಿನ ಜಾಲವಾಡಗಿ ಗ್ರಾಮದಲ್ಲಿರುವ ನೀರು ಶುದ್ಧೀಕರಣ ಘಟಕದಲ್ಲಿ ಪಂಪ್ ನಿರ್ವಹಣೆ ಕೆಲಸ ಕೈಗೊಳ್ಳುವುದರಿಂದ ಅಗಸ್ಟ್ 5ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5.30ರವರೆಗೆ ಗದಗ, ಮುಂಡರಗಿ, ಶಿರಹಟ್ಟಿ ತಾಲೂಕು ವ್ಯಾಪ್ತಿಯ 212 ಜನವಸತಿಗಳಿಗೆ ಹಾಗೂ ಮುಂಡರಗಿ ಪಟ್ಟಣಕ್ಕೆ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಸಹಕರಿಸಬೇಕೆಂದು ಪ್ರಕಟಣೆ ತಿಳಿಸಿದೆ.

### ಕಾಡು ಹಂದಿಗಳ ಹಾವಳಿಗೆ ಬೆಳೆ ನಷ್ಟ * ದಿಕ್ಕು ತೋಚದ ಅನ್ನದಾತನ ಮೊಗದಲ್ಲಿ ಚಿಂತೆಯ ಗೆರೆ

# ವರಾಹ ಕಾಟಕ್ಕೆ ರೈತ ಕಂಗಾಲು



ಕಾಡು ಹಂದಿ, ಜಿಂಕೆ ಇತ್ಯಾದಿ ವನ್ಯ ಪ್ರಾಣಿಗಳಿಂದ ಬೆಳೆ ಹಾನಿಯಾದಲ್ಲಿ, ರೈತರು ತಕ್ಷಣ ಅರಣ್ಯ ಇಲಾಖೆಗೆ ದೂರು ಸಲ್ಲಿಸಬೇಕು. ಅರಣ್ಯ ವ್ಯಾಪ್ತಿಯ ಪ್ರದೇಶದಲ್ಲಿ ಹಲವು ಕಡೆ ತಂತಿ ಬೇಲಿ ನಿರ್ಮಿಸಿದ್ದೇವೆ. ರೈತರು ಕೂಡ ವಯಕ್ತಿಕವಾಗಿ ತಮ್ಮ ಜಮೀನುಗಳಿಗೆ ತಂತಿಬೇಲಿ ಹಾಕಿಸಿಕೊಳ್ಳಬೇಕು. ಸರಕಾರದಿಂದ ಕಬ್ಬಿಣದ ತಂತಿ ಬೇಲಿಗೆ ಶೇ.50ರ ಸಬ್ಸಿಡಿ ದರದಲ್ಲಿ ಸಹಾಯ ಧನ ನೀಡಲಾಗುತ್ತದೆ. ಬೆಳೆ ಹಾನಿ ಮಾಡಿದಲ್ಲಿ ಜಮೀನಿನ ಮಾಲಿಕರು ಅನ್‌ಲೈನ್ ಅರ್ಜಿಗಳನ್ನು ಸಲ್ಲಿಸಬೇಕು. ಸರಕಾರರಿಂದ ಪರಿಹಾರ ಧನ ನೀಡಲಾಗುತ್ತದೆ. ತಾಲೂಕಿನಾದ್ಯದಂತ ಹಾನಿಯಾದ ಜಮೀನುಗಳ ರೈತರಿಗೆ ಕಳೆದ ವರ್ಷ ಸುಮಾರು 10ಲಕ್ಷ ರೂ.ಗಳ ಪರಿಹಾರ ಧನ ವಿತರಿಸಲಾಗಿದೆ.

– ವೀರೇಂದ್ರ ಮರಿಬಸಣ್ಣವರ.
ವಲಯ ಅರಣ್ಯಾಧಿಕಾರಿಗಳು, ಮುಂಡರಗಿ.




■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಬಿತ್ತನೆಯಾದ ಕ್ಷಣದಿಂದ ಪ್ರಾರಂಭಿಸಿ, ಬೆಳೆ ಕಟಾವಿನ ಸಮಯದವರೆಗೂ ಕಾಡು ಪ್ರಾಣಿಗಳ ಬಾಧೆ ಅನ್ನದಾತ ರೈತರನ್ನು ಹೈರಾಣಾಗಿಸುತ್ತವೆ. ನಿಯಂತ್ರಣಕ್ಕಾಗಿ ಎಷ್ಟೇ ಪ್ರಯತ್ನಪಟ್ಟರೂ ಫಲಕಾರಿಯಾಗದು. ಇದೀಗ, ಮುಂಡರಗಿ ತಾಲೂಕಿನ ಕೃಷಿ ಭೂಮಿಗಳಲ್ಲಿ ಬಿತ್ತನೆ ಮಾಡಿದ್ದ ಶೇಂಗಾ ಬೆಳೆ ಕಾಡು ಹಂದಿಗಳ ದಾಳಿಯಿಂದಾಗಿ ನಾಶವಾಗುತ್ತಿದೆ.

ತಾಲೂಕಿನ ಕಲಕೇರಿ ಗ್ರಾಮದ ವ್ಯಾಪ್ತಿಯಲ್ಲಿ, ವಿರೂಪಾಪುರ, ತಾಂಡಾ, ಮುಷಿಕೊಪ್ಪ, ಬಾಗೇವಾಡಿ, ಜಾಲವಾಡಗಿ, ಮರುಡಿತಾಂಡಾ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜಮೀನುಗಳಿಗೆ ಕಳೆದ ಮೂರು ದಿನಗಳಿಂದ ಸತತವಾಗಿ 10ಕ್ಕೂ ಹೆಚ್ಚು ಕಾಡು ಹಂದಿಗಳಿರುವ ಗುಂಪು ನುಗ್ಗಿ ಜಮೀನುಗಳಲ್ಲಿ ಬಿತ್ತನೆ ಮಾಡಿದ್ದ ಶೇಂಗಾ, ಜೋಳ, ಹೆಸರು, ಮೆಕ್ಕೆಜೋಳದ ಬೀಜಗಳನ್ನಷ್ಟೇ ಅಲ್ಲದೆ, ಚಿಗುರಿದ ಬೆಳೆಗಳನ್ನೂ ಬಗೆದು ತಿಂದು ಹಾಕುತ್ತಿವೆ.

ಕಾಡು ಹಂದಿಗಳ ಕಾಟದಿಂದ ರೈತರು ಸಾಕಷ್ಟು ನಷ್ಟ ಅನುಭವಿಸುವಂತಾಗಿದೆ. ಅರಣ್ಯ ಇಲಾಖೆಯ ಅಧಿಕಾರಿಗಳು ಸೂಕ್ತ ಕ್ರಮಗಳನ್ನು ಕೈಗೊಂಡು ಕಾಡು ಹಂದಿಗಳ ಕಾಟವನ್ನು ತಪ್ಪಿಸಬೇಕು ಎಂದು ರೈತರು ಆಗ್ರಹಿಸಿದ್ದಾರೆ. ರೈತ ನಾಗಪ್ಪ ಮರಿಗೌಡ ಮಾತನಾಡಿ, ಸಾವಿರಾರು ರೂಪಾಯಿ ಖರ್ಚು ಮಾಡಿ ಶೇಂಗಾ ಬಿತ್ತನೆ ಬೀಜಗಳನ್ನು ತಂದು ಜಮೀನಿನಲ್ಲಿ ಬಿತ್ತನೆ ಮಾಡಲಾಗಿತ್ತು. ಎರಡು ಎಕರೆಗೆ ಬಿತ್ತನೆ ಬೀಜ, ಗೊಬ್ಬರ, ಕೂಲಿ ಕಾರ್ಮಿಕರ ಖರ್ಚು ಸಾಕಷ್ಟು ಬರುತ್ತದೆ. ಕಷ್ಟಪಟ್ಟು ಸಾಲ–ಸೋಲ ಮಾಡಿ ಬೆಳೆದ ಫಸಲು ಕಾಡು ಪ್ರಾಣಿಗಳ ತುತ್ತಾಗುತ್ತಿದೆ. ಪ್ರತಿನಿತ್ಯ ಕಾಡು ಹಂದಿಗಳ ದಾಳಿಯಿಂದ ನಮಗೆ ದಿಕ್ಕೇ ತೋಚದಂತಾಗಿದೆ. ಈ ಭಾಗದಲ್ಲಿ ಕಳೆದ ಮೂರ್ನಾಲ್ಕು ದಿನಗಳಿಂದ ಕಾಡುಹಂದಿಗಳ ದಾಂಧಲೆ ಹೆಚ್ಚಾಗಿದೆ. ಮಧ್ಯರಾತ್ರಿ 20ಕ್ಕೂ ಹೆಚ್ಚು ಕಾಡು ಹಂದಿಗಳು ಜಮೀನುಗಳಿಗೆ ನುಗ್ಗಿ, ಬಿತ್ತನೆ ಬೀಜ ಮತ್ತು ಚಿಗುರಿದ ಬೆಳೆ ತಿಂದು ಹಾಕುತ್ತಿವೆ. ಸಂಬಂಧಿಸಿದ ಅರಣ್ಯ ಇಲಾಖೆಯ ಅಧಿಕಾರಿಗಳು ಗಮನಹರಿಸಿ ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

### ಜಿಲ್ಲೆಯ ರಸಗೊಬ್ಬರ, ಕೀಟನಾಶಕ, ಬೀಜ ಮಾರಾಟಗಾರರಿಗೆ ಜಂಟಿ ಕೃಷಿ ನಿರ್ದೇಶಕರ ಸೂಚನೆ

# ನಿಯಮ ಮೀರಿದರೆ ಕ್ರಿಮಿನಲ್ ಮೊಕದ್ದಮೆ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯ ಖಾಸಗಿ ರಸಗೊಬ್ಬರ, ಕೀಟನಾಶಕ, ಬೀಜ ಮಾರಾಟಗಾರರು ಹಾಗೂ ಸಹಕಾರಿ ಮಾರಾಟಗಾರರು ತಮ್ಮ ಮಾರಾಟ ಮಳಿಗೆಯಲ್ಲಿ ಕಡ್ಡಾಯವಾಗಿ ಕೃಷಿ ಪರಿಕರಗಳ ಬೆಲೆಗಳನ್ನು ಪ್ರದರ್ಶಿಸಬೇಕು. ಕಡ್ಡಾಯವಾಗಿ ರೈತರಿಗೆ ಖರೀದಿಯ ರಸೀದಿಯಲ್ಲಿ ಬೆಲೆ, ಲಾಟ್ ನಂಬರುಗಳನ್ನು ನಮೂದಿಸಬೇಕು. ರಸಗೊಬ್ಬರಗಳ ವಿತರಣೆಯಲ್ಲಿ ಇತರೆ ಪರಿಕರಗಳನ್ನು ಲಿಂಕ್ ಮಾಡಿ ಮಾರಾಟ ಮಾಡುವಂತಿಲ್ಲ. ಯಾವುದೇ ಪರಿಕರ ಮಾರಾಟಗಾರರು ಹೆಚ್ಚಿನ ಬೆಲೆಯಲ್ಲಿ ಅಥವಾ ಲಿಂಕ್ ಮಾಡುವುದಾಗಲಿ, ಕಳಪೆ ಗುಣಮಟ್ಟದ ಬೀಜ, ರಸಗೊಬ್ಬರ, ಕೀಟನಾಶಕ ಪೂರೈಕೆ ಮಾಡಿದ್ದು ಕಂಡುಬಂದಲ್ಲಿ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಜಂಟಿ ಕೃಷಿ ನಿರ್ದೇಶಕರಾದ ತಾರಾಮಣಿ ತಿಳಿಸಿದ್ದಾರೆ.



ಕೃಷಿ ಪರಿಕರ ಮಾರಾಟಗಾರರು ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಾರಾಟ ಮಾಡುವಂತೆ ಸೂಚಿಸಲಾಗಿದೆ. ಸರ್ಕಾರ ನಿಗದಿಪಡಿಸಲಾದ ಹೆಚ್ಚಿನ ದರಕ್ಕೆ ಕೃಷಿ ಪರಿಕರಗಳನ್ನು ಮಾರಾಟ ಮಾಡುವಂತಿಲ್ಲ. ಪರವಾನಿಗೆ ಪಡೆಯದೇ ಕೀಟನಾಶಕ, ರಸಗೊಬ್ಬರ, ಬೀಜ ಮಾರಾಟ ಮಾಡುವಂತಿಲ್ಲ. ಕಡ್ಡಾಯವಾಗಿ ಕೃಷಿ ಪರಿಕರಗಳ ಮಾರಾಟ ಬೆಲೆಯನ್ನು ಸಾರ್ವಜನಿಕರಿಗೆ ಕಾಣುವಂತೆ ಪ್ರದರ್ಶಿಸಬೇಕು. ಪರವಾನಿಗೆಯನ್ನು ಸಕಾಲಕ್ಕೆ ನವೀಕರಿಸಿ ಪರವಾನಿಗೆಯಲ್ಲಿ ನಮೂದಿಸದಿರುವ ಕೃಷಿ ಪರಿಕರಗಳನ್ನು ಮಾರಾಟ ಮಾಡುವಂತಿಲ್ಲ. ಅವಧಿ ಮುಗಿದಿರುವ ಕೀಟನಾಶಕ, ರಸಗೊಬ್ಬರ, ಬೀಜಗಳನ್ನು ಮಾರಾಟ ಮಾಡುವಂತಿಲ್ಲ. ಕೃಷಿ ಪರಿಕರ ಮಾರಾಟ ರಸೀದಿಯಲ್ಲಿ ಕಡ್ಡಾಯವಾಗಿ ರೈತರ ಸಹಿ ಪಡೆಯಬೇಕು. ಲಾಟ್ ನಂಬರ್ ನಮೂದಿಸಬೇಕು. ಚಿಲ್ಲರೆ ಮತ್ತು ಸಗಟು ರಸಗೊಬ್ಬರ ಮಾರಾಟಗಾರರು ಪ್ರತ್ಯೇಕವಾಗಿ ಲೈಸನ್ಸ್ ಪಡೆಯುವುದು ಮತ್ತು ಪ್ರತ್ಯೇಕವಾಗಿ ದಾಖಲಾತಿ ನಿರ್ವಹಣೆ ಮಾಡುವುದು. ಅವಧಿ ಮುಗಿದ ಬೀಜಗಳನ್ನು ದಾಸ್ತಾನು ಮಾಡಿ ಮಾರಾಟ ಮಾಡುವಂತಿಲ್ಲ. ಕಳಪೆ ಮಟ್ಟದ ಕೃಷಿ ಪರಿಕರಗಳನ್ನು ಮಾರಾಟ ಮಾಡುವಂತಿಲ್ಲ ಎಂದು ಜಂಟಿ ಕೃಷಿ ನಿರ್ದೇಶಕರಾದ ತಾರಾಮಣಿ ತಿಳಿಸಿದ್ದಾರೆ.

ವ್ಯಾಪಾರಸ್ಥರು ಈ ರೀತಿ ಲಿಂಕ್ ಮಾಡುವುದು, ಹೆಚ್ಚಿನ ಬೆಲೆಯಲ್ಲಿ ರಸಗೊಬ್ಬರ ಮಾರಾಟ ಮಾಡುವುದು ಅಥವಾ ಚಿಲ್ಲರೆಯಾಗಿ ಬೀಜಗಳನ್ನು ಮಾರಾಟ ಮಾಡುವುದು ಕಂಡುಬಂದಲ್ಲಿ ರೈತ ಬಾಂಧವರು ಹತ್ತಿರದ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದಾಗಿದೆ.

### ಲಕ್ಷ್ಮೇಶ್ವರ ಗ್ರುಪ್–2 ಮಟ್ಟದ ಕ್ರೀಡಾಕೂಟ ಉದ್ಘಾಟಿಸಿದ ಎಂ ಎಂ ಹವಳದ ಅಭಿಮತ

# ದೈಹಿಕ, ಮಾನಸಿಕ ದೃಢತೆಗೆ ಕ್ರೀಡೆ ಸಹಕಾರಿ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸದೃಢವಾದ ದೇಹದಲ್ಲಿ ಮಾತ್ರ ಸದೃಢವಾದ ಮನಸ್ಸು ನೆಲೆಗೊಳ್ಳಲು ಸಾಧ್ಯ. ಈ ನಿಟ್ಟನಲ್ಲಿ ಕ್ರೀಡೆಯು ಶಾರೀರಿಕ ಮತ್ತು ಮಾನಸಿಕ ಬಲವರ್ಧನೆಗೆ ಅಗತ್ಯವಾಗಿದೆ ಎಂದು ತಾಲೂಕಾ ದೈಹಿಕ ಶಿಕ್ಷಣಾಧಿಕಾರಿ ಎಂ ಎಂ ಹವಳದ ಹೇಳಿದರು.

ಅವರು ಪಟ್ಟಣದ ಉಮಾ ವಿದ್ಯಾಲಯ ಹೈಸ್ಕೂಲ್ ಮೈದಾನದಲ್ಲಿ 2023–24ನೇ ಸಾಲಿನ ಲಕ್ಷೇಶ್ವರ ಗ್ರುಪ್–2 ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಪಠ್ಯದ ಜೊತೆಯಲ್ಲಿ ಕ್ರೀಡೆಯಲ್ಲಿ ಹೆಚ್ಚಿನ ಸಾಧನೆ ಮಾಡಲಿ ಎನ್ನುವ ಉದ್ದೇಶದಿಂದ ಸರ್ಕಾರ ಪ್ರತಿ ವರ್ಷ ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದಲ್ಲಿ ಕ್ರೀಡಾಕೂಟ ಏರ್ಪಡಿಸಿ ಮಕ್ಕಳಲ್ಲಿ ಸ್ಪರ್ಧಾ ಮನೋಭಾವ ಬೆಳಸಲಾಗುತ್ತದೆ. ಕ್ರೀಡೆಯಲ್ಲಿ ಸೋಲು–ಗೆಲುವು ಮುಖ್ಯವಲ್ಲ, ಸ್ಪರ್ಧೆಯಲ್ಲಿ ಭಾಗವಹಿಸುವಿಕೆ ಮುಖ್ಯ. ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ ಹೆಚ್ಚಿಸುವ ನಿಟ್ಟಿನಲ್ಲಿ ಕ್ರೀಡೆಗಳ ಪಾತ್ರ ಪ್ರಮುಖವಾಗಿದೆ. ಕ್ರೀಡೆಯಲ್ಲಿ ಭಾಗವಹಿಸುವುದರಿಂದ ಸೋಲು–ಗೆಲುವನ್ನು ▸▸3ನೇ ಪುಟಕ್ಕೆ



ಗದಗ ತಹಸೀಲ್ದಾರರಾಗಿದ್ದ ಮಲ್ಲಿಕಾರ್ಜುನ ಹೊನಗಣ್ಣವರ ಗದಗದಿಂದ ಸವದತ್ತಿಗೆ ವರ್ಗಾವಣೆಯಾದ ಹಿನ್ನೆಲೆಯಲ್ಲಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಗದಗ ಜಿಲ್ಲೆಯ ಬಿಜೆಪಿ ಯುವ ಮುಖಂಡರಾದ ರಮೇಶ ಎನ್ ಸಜ್ಜಗಾರ, ಕೆ ಕೆ ಮಾಳಗೌಡ್ರ, ಅರವಿಂದ ಕೇಲೂರ, ಉಪತಹಸೀಲ್ದಾರ ಕಣ್ಣೂರ, ಶ್ರೀಕಾಂತ, ಮಂಜುನಾಥ ಶಾಂತಗೇರಿ ಮುಂತಾದವರು ಉಪಸ್ಥಿತರಿದ್ದು ಶುಭ ಹಾರೈಸಿದರು.

## ಮತದಾರರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ–2024

■ ವಿಜಯಸಾಕ್ಷಿ ಸುದ್ದಿ, ಗದಗ

ಭಾರತ ಚುನಾವಣಾ ಆಯೋಗದ ನಿರ್ದೇಶನದನ್ವಯ 1-1-2024 ಅರ್ಹತಾ ದಿನಾಂಕವುಳ್ಳಂತೆ ವಿಧಾನಸಭಾ ಕ್ಷೇತ್ರಗಳ ಮತದಾರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ 2024ರ ವೇಳಾಪಟ್ಟಿಯನ್ನು ಹೊರಡಿಸಲಾಗಿದೆ. ಸದರಿ ವೇಳಾಪಟ್ಟಿಯಂತೆ ಪೂರ್ವ ಪರಿಷ್ಕರಣೆ ಚಟುವಟಿಕೆಗಳ ಅಂಗವಾಗಿ, ಮತಗಟ್ಟೆ ಮಟ್ಟದ ಅಧಿಕಾರಿಗಳು(ಬಿಎಲ್‌ಓ) ಜುಲೈ



21ರಿಂದ ಆಗಸ್ಟ್ 21ರವರೆಗೆ ಮನೆ ಮನೆಗೆ ಭೇಟಿ ನೀಡಿ ಪರಿಶೀಲನೆ ಕೈಗೊಂಡು ಕೆಳಗಿನಂತೆ ಮಾಹಿತಿ ಪಡೆಯಬಹುದು.

ಮತದಾರ ಪಟ್ಟಿಯಲ್ಲಿ ನೋಂದಣಿಯಾಗದ ಅರ್ಹ ನಾಗರಿಕರು (ಅರ್ಹತೆ ದಿನಾಂಕ 1-10-2023), ಪ್ರೊಸ್ಪೆಕ್ಟಿವ್(ಭಾವೀ) ಮತದಾರರು (ಅರ್ಹತೆ ದಿನಾಂಕ 1-1-2024), ಪ್ರೊಸ್ಪೆಕ್ಟಿವ್(ಭಾವೀ) ಮತದಾರರು (ನಂತರದ ಮೂರು ಅರ್ಹತಾ ದಿನಾಂಕಗಳಿಗೆ ಅರ್ಹಗೊಳ್ಳುವ ಮತದಾರರು), ಒಂದಕ್ಕಿಂತ ಹೆಚ್ಚು ಬಾರಿ ನೋಂದಣಿಯಾದ ಮತದಾರರ ವಿವರ/ಮೃತ ಮತದಾರರ ವಿವರ/ಶಾಶ್ವತವಾಗಿ ವರ್ಗಾವಣೆಗೊಂಡ ▸▸3ನೇ ಪುಟಕ್ಕೆ

## ಬಿಟ್ಟಿ ತಿಂದವರ ಚರ್ಮ ಬೆಳ್ಳಗಿರಬಹುದು: ಪ್ರಿಯಾಂಕ್ ಖರ್ಗೆ ಟ್ವೀಟ್

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕುರಿತು ಮಾಜಿ ಗೃಹ ಸಚಿವ ಆರಗ ಜ್ಞಾನೇಂದ್ರ ನೀಡಿದ ಹೇಳಿಕೆ ರಾಜ್ಯ ರಾಜಕಾರಣದಲ್ಲಿ ಭಾರೀ ವಿವಾದವನ್ನೇ ಸೃಷ್ಟಿಸಿದೆ. ಮಲ್ಲಿಕಾರ್ಜುನ ಖರ್ಗೆ ಅವರ ಮೈಬಣ್ಣದ ಬಗ್ಗೆ ಆರಗ ಜ್ಞಾನೇಂದ್ರ ಅವರು ಹೀಯಾಳಿಸಿ ಮಾತನಾಡಿದ್ದಾರೆ. ಇದಕ್ಕೆ ಕಾಂಗ್ರೆಸ್ ನಾಯಕರು ವ್ಯಾಪಕ ವಾಗ್ದಾಳಿ ನಡೆಸಿದ್ದಾರೆ.

ಈ ವಿಚಾರವಾಗಿ ಟ್ವೀಟ್ ಮಾಡಿರುವ ಸಚಿವ ಪ್ರಿಯಾಂಕ್ ಖರ್ಗೆ, 'ಆರಗ ಜ್ಞಾನೇಂದ್ರ ಅವರೇ, ನೀವು ಆಡಿರುವ ಮಾತು ಬರೀ ನಿಮ್ಮ ಮಾತುಗಳಲ್ಲ, ಕೇಶವ ಕೃಪಾದ ಪ್ರಭಾವದ ಮಾತು. ಬಿಜೆಪಿಯ ಆಂತರ್ಯದೊಳಗೆ ಅಡಗಿದ್ದ ಶೋಷಿತರ ಬಗೆಗಿನ ಅಸಹನೆಯ ಮಾತು' ಎಂದಿದ್ದಾರೆ. ಸುಟ್ಟು ಕರಕಲಾಗಿದ್ದು ನಿಮ್ಮ ಬುದ್ಧಿಯೇ ಹೊರತು ಕಲ್ಯಾಣ ಕರ್ನಾಟಕದ ಜನರಲ್ಲ. ಶತಶತಮಾನಗಳಿಂದ ವರ್ಣಾಶ್ರಮದ ಹೆಸರಲ್ಲಿ ಶೋಷಣೆ ನಡೆಸಿ ಶ್ರಮಜೀವಿಗಳ ಬೆವರಿನಲ್ಲಿ ಬಿಟ್ಟಿ ತಿಂದವರ ಚರ್ಮ ಬೆಳ್ಳಗಿರಬಹುದು. ಸ್ವಾಭಿಮಾನದಿಂದ ದುಡಿದು ತಿನ್ನುವವರ ಮೈ ಬಿಸಿಲಲ್ಲಿ ಸುಟ್ಟಿರುತ್ತದೆ ಎಂದು ಪ್ರಿಯಾಂಕ್ ಖರ್ಗೆ ಕಟುವಾಗಿ ವಾಗ್ದಾಳಿ ನಡೆಸಿದ್ದಾರೆ.

## ರೈತ ಬಾಂಧವರ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪ್ರಸ್ತುತ 2023–24ನೇ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯ ಜಿಲ್ಲಾ ಪಂಚಾಯತ್ ತೋಟಗಾರಿಕೆ ಇಲಾಖೆ ಹಾಗೂ ಗ್ರಾಮ ಪಂಚಾಯತ್ ಮಟ್ಟದ ಸಂಜೀವಿನಿ ಒಕ್ಕೂಟಗಳ (ಓಖಐಬ) ಜಂಟಿ ಸಹಯೋಗದೊಂದಿಗೆ ಅಭಿಯಾನ ರೂಪದಲ್ಲಿ ಅಪ್ರಧಾನ ಹಣ್ಣಿನ ಬೆಳೆಗಳಾದ ಬೆಟ್ಟದ ನೆಲ್ಲಿ, ಬಾರೆ, ಅಂಜೂರ, ಹಲಸು, ನೇರಳೆ, ಬೆಣ್ಣೆಹಣ್ಣು, ಡ್ರ್ಯಾಗನ್ ಹಣ್ಣು, ಹುಣಸೆ, ಸೀತಾಫಲ, ಕಿರುನೆಲ್ಲಿ ಹಣ್ಣು ಬೆಳೆಗಳನ್ನು ಕ್ಲಸ್ಟರ್ ರೂಪದಲ್ಲಿ ಪ್ರದೇಶ ವಿಸ್ತರಣೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಜಿಲ್ಲೆಯ ರೈತ ಬಾಂದವರು ಸದರಿ ಬೆಳೆಗಳನ್ನು ಬೆಳೆದು ಉತ್ತಮ ಇಳುವರಿ ಪಡೆಯಲು ಅವಕಾಶವಿದ್ದು, ಎಲ್ಲ ತಾಲೂಕುಗಳ ಗ್ರಾಮೀಣ ಭಾಗದ ಆಸಕ್ತ ರೈತ ಬಾಂಧವರು ಅರ್ಜಿ ಸಲ್ಲಿಸಲು ಸಮಿಪದ ಗ್ರಾಮ ಪಂಚಾಯತ್ ಅಥವಾ ತೋಟಗಾರಿಕೆ ಕಛೇರಿಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

### ಅಬ್ಬರದ ಪ್ರಚಾರವಿಲ್ಲದೇ ನಿರ್ಗತಿಕರ ಸೇವೆಯಲ್ಲಿ ತೊಡಗಿದ ದಂಪತಿ

# ಪರಸ್ಪರ ಸಹಾಯ ಮಾಡುವುದೇ ಮನುಷ್ಯತ್ವ

■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ನಗರದ ಈ ದಂಪತಿಗಳು ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ತುತ್ತು ಅನ್ನಕ್ಕಾಗಿ ನಿತ್ಯವೂ ಹೋರಾಡುತ್ತಿರುವ ಹಸಿದವರಿಗೆ ಮತ್ತು ನಿರ್ಗತಿಕ ವರ್ಗಗಳಿಗೆ ಭರವಸೆಯಾಗಿ ನಿಂತಿದ್ದಾರೆ. ಹುಬ್ಬಳ್ಳಿ ನಗರದಲ್ಲಿ ನಿತ್ಯವೂ ಸರಾಸರಿ 50 ಜನರಿಗೆ ಆಹಾರವನ್ನು ನೀಡುತ್ತ, ಕರಿಯಪ್ಪ ಮತ್ತು ಸುನಂದಾ ಶಿರಹಟ್ಟಿ ದಂಪತಿಗಳು ಕಳೆದ 15 ವರ್ಷಗಳಿಂದ ಮೌನವಾಗಿಯೇ ತಮ್ಮ ಈ ಕಾರ್ಯವನ್ನು ನಡೆಸಿಕೊಂಡು




ಬರುತ್ತಿದ್ದಾರೆ. ಬೀದಿಗಳಲ್ಲಿ ವಾಸಿಸುವ ನಿರ್ಗತಿಕರಿಗೆ ಮುಖ ಕ್ಷೌರವನ್ನೂ ಮಾಡುತ್ತಾರೆ.

ಪ್ರತಿದಿನ ಕರಿಯಪ್ಪ ಬಿಸಿ ಆಹಾರದೊಂದಿಗೆ ಹೊರಟು ಹುಬ್ಬಳ್ಳಿ ರೈಲ್ವೆ ನಿಲ್ದಾಣ, ಆಸ್ಪತ್ರೆಯ ಗೇಟ್‌ಗಳಂತಹ ಅಸಹಾಯಕರು ಹೆಚ್ಚಾಗಿರುವ ಪ್ರದೇಶಗಳಲ್ಲಿ ಸುತ್ತಾಡಿ, ಅಗತ್ಯವಿರುವವರಿಗೆ ಚಪಾತಿ ಅಥವಾ ಅನ್ನವನ್ನು ನೀಡುತ್ತಾರೆ. ಸದ್ಯ ಹಳೇಹುಬ್ಬಳ್ಳಿಯ ಆನಂದ ನಗರದ ನಿವಾಸಿಗಳಾದ ಇವರು, ಮೂಲತಃ ಗದಗ ಜಿಲ್ಲೆಯ ಶಿರಹಟ್ಟಿಯವರು. ಮದುವೆ, ಹುಟ್ಟುಹಬ್ಬದ ಪಾರ್ಟಿಗಳು ಮತ್ತಿತರ ಕಾರ್ಯಕ್ರಮಗಳಲ್ಲಿ ಹೆಚ್ಚುಳಿದ ▸▸3ನೇ ಪುಟಕ್ಕೆ

ಕರಿಯಪ್ಪ ಈಗ ಹೊಸ ಜವಾಬ್ದಾರಿಯನ್ನೂ ವಹಿಸಿಕೊಂಡಿದ್ದಾರೆ. ನಿಷೇಧಿತ ಪ್ಲಾಸ್ಟಿಕ್‌ನಿಂದ ದೂರವಿರಲು ಜನರಲ್ಲಿ ಜಾಗೃತಿ ಮೂಡಿಸಿ, ಶಿಕ್ಷಣ ನೀಡುವ ಮತ್ತು ಕಾಗದದ ಪ್ಯಾಕೆಟ್‌ಗಳಲ್ಲಿ ಆಹಾರವನ್ನು ಒದಗಿಸಲು ಅವರು ಸ್ವತಃ ತಮ್ಮ ಕೈಲಾದಷ್ಟು ಪ್ರಯತ್ನಿಸುತ್ತಾರೆ. ಒಟ್ಟಿನಲ್ಲಿ, ಅಗತ್ಯವುಳ್ಳವರಿಗೆ ತಮ್ಮ ಕೈಲಾದಷ್ಟು ನೆರವು ನೀಡುತ್ತ, ಸಮಾಜಸೇವೆಯಲ್ಲಿ ತೊಡಗಿಸಿಕೊಂಡಿರುವ ಕರಿಯಪ್ಪ ಶಿರಹಟ್ಟಿ ದಂಪತಿಗಳು ಇತರರಿಗೂ ಪ್ರೇರಣೆಯಾಗಿದ್ದಾರೆ.

## ಸಾಕ್ಷಿ ಸುಭಾಷಿತ

ಮನುಷ್ಯ ಮಲಗುವ ಮುನ್ನ ತನ್ನಲ್ಲಿರುವ ಆ ದಿನದ ಎಲ್ಲ ರೋಷವನ್ನು ಮರೆತು ಬಿಡುವುದು ಒಳ್ಳೆಯ ಗುಣ
–ಸುಭಾಷಿತ

## ಸಂಪಾದಕೀಯ

# ಆನ್‌ಲೈನ್ ಬೆಟ್ಟಿಂಗ್, ಗೇಮ್ ನಿಷೇಧವಾಗಲಿ

ದೇಶಾದ್ಯಂತ ಹೆಚ್ಚುತ್ತಿರುವ ಆನ್ ಲೈನ್ ಬೆಟ್ಟಿಂಗ್ ಮತ್ತು ಆನ್‌ಲೈನ್ ಗೇಮ್‌ಗಳು ಯುವ ಸಮೂಹದ ದಿಕ್ಕು ತಪ್ಪಿಸುತ್ತಿದೆ. ಆನ್ ಲೈನ್ ಹಾವಳಿಯಿಂದ ಯುವಕರು ಹಣಕ್ಕಾಗಿ ಅಡ್ಡ ದಾರಿಗೆ ಇಳಿಯುತ್ತಿದ್ದಾರೆ. ಸಣ್ಣ ವಯಸ್ಸಿಗೆ ಸಾಲದ ಸುಳಿಗೆ ಸಿಲುಕಿ ಅದರಿಂದ ಹೊರಬರಲಾಗದೆ ಪ್ರಾಣಾರ್ಪಣೆಗೂ ಮುಂದಾಗಿರುವ ಅನೇಕ ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ.

ಆನ್ ಲೈನ್ ಜೂಜಾಟವೇ ಇರಲಿ ಅಥವಾ ಹಿಂದಿನಂತೆ ನಡೆಯುತ್ತಿದ್ದ ತೆರೆಮರೆಯ ಜೂಜಾಟವೇ ಇರಲಿ, ಅನೇಕ ಸಂಸಾರಗಳನ್ನು ಬೀದಿಗೆ ತಂದಿವೆ. ಮದ್ಯಪಾನ, ಧೂಮಪಾನ ಮತ್ತು ಜೂಜಾಟಕ್ಕೆ ಬಲಿಯಾದವರ ಸಂಖ್ಯೆಗಿಂತ ಅಂತ ಕುಟುಂಬದ ಸದಸ್ಯನ್ನು ಹೊಂದಿದ ಮತ್ತು ಕಳೆದುಕೊಂಡ ಕುಟುಂಬಗಳ ಕಣ್ಣೀರ ಕಥೆಗಳು ಕಲ್ಲು ಹೃದಯವನ್ನು ಕರಗಿಸಬಲ್ಲವು.

ಆ ಕಾರಣಕ್ಕಾಗಿಯೇ ಕರ್ನಾಟಕದಲ್ಲಿ ಲಾಟರಿ ನಿಷೇಧಿಲಾಯಿತು. ಆದರೂ ಓಸಿ, ಮಟ್ಕಾ ದಂಧೆ ಇನ್ನೂ ವ್ಯಾಪಕವಾಗಿ ನಡೆಯುತ್ತಿದೆ. ಪೊಲೀಸರು ಎಷ್ಟೆ ದಾಳಿ ನಡೆಸಿದರೂ ಮಟ್ಕಾ ದಂಧೆಗೆ ಬ್ರೇಕ್ ಬೀಳುತ್ತಿಲ್ಲ. ಕೇವಲ ಒಂದೆರಡು ಮಟ್ಕಾ ದಂಧೆ ನಿಷೇಧಿಸಲು ಸಾಧ್ಯವಾಗದ ರಾಜ್ಯ ಸರಕಾರಕ್ಕೆ ಆನ್‌ಲೈನ್ ಗೇಮ್ ಮತ್ತು ಜೂಜಾಟ ಬಹುದೊಡ್ಡ ಸವಾಲು ಸೃಷ್ಟಿಸಿದೆ. ಇವತ್ತು ಆನ್‌ಲೈನ್ ಜಗತ್ತಿನಲ್ಲಿ ಸಾವಿರಾರು ಜೂಜಾಟದ ಅಡ್ಡೆಗಳಿವೆ. ಅದಕ್ಕಿಂತ ಮಿಗಿಲಾಗಿ ಕ್ರೀಡೆಗಳನ್ನು ಬಳಸಿಕೊಂಡು ಅನ್‌ಲೈನ್ ಗೇಮ್ ಹೆಸರಿನ ಜೂಜಾಟದ ಅನ್‌ಲೈನ್ ವೇದಿಕೆಗಳು ಇನ್ನೂ ಸಾಕಷ್ಟಿವೆ. ಮದ್ಯಪಾನ, ಧೂಮಪಾನವೂ ಅಪಾಯಕಾರಿಯೇ. ಆದರೆ ಅದಕ್ಕೊಂದು ಮಿತಿ ಇದೆ. ಕುಡಿತ ಸಾಕು ಎನಿಸಬಹುದು. ಧೂಮಪಾನ ಮಾಡುವ ವ್ಯಕ್ತಿ ದಿನಕ್ಕಿಷ್ಟೆ ಬೇಕು ಎಂದು ಬಯಸುತ್ತಾನೆ ಆದರೆ ಜೂಜಾಟ ಹಾಗಲ್ಲ ಅದಕ್ಕೊಂದು ಮಿತಿ ಇಲ್ಲ ಗೆಲ್ಲುವ ಉಮೇದಿಯಲ್ಲಿ ತನ್ನ ಬಳಿಯ ಎಲ್ಲ ಸಂಪತ್ತು ಕರಗಿದರೂ ಮತ್ತೆ ಆಡಬೇಕು ಎಂದು ಮನಸ್ಸು ಬಯಸುತ್ತದೆ ಅಲ್ಲಿಗೆ ಯುವಕರ ಕಥೆ ಮುಗಿಯುತ್ತದೆ. ಕಳ್ಳತನ, ಮೋಸದಿಂದ ಪಡೆದ ಹಣವನ್ನು ಜೂಜಾಟಕ್ಕೆ ಹಚ್ಚಿ ನಷ್ಟ ಅನುಭವಿಸಿ ಪ್ರಾಣ ಕಳೆದುಕೊಳ್ಳಬೇಕಾದ ಸ್ಥಿತಿ ತಂದುಕೊಳ್ಳುತ್ತಿದ್ದಾರೆ.

ಈ ಎಲ್ಲ ಕಾರಣಗಳಿಗಾಗಿ ಆನ್‌ಲೈನ್ ಜೂಜಾಟ ರಾಜ್ಯದಲ್ಲಾದರೂ ನಿಷೇಧವಾಗಬೇಕು. ಈ ಬಗ್ಗೆ ಸಿದ್ದರಾಮಯ್ಯ ಚಿಂತನೆ ನಡೆಸಿದ್ದೆವೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಆ ಚಿಂತನೆಗೆ ಸ್ಪಷ್ಟ ರೂಪ ಸಿಗಬೇಕು. ಕಠಿಣ ಕಾನೂನು ಜಾರಿಯಾಗಬೇಕು. ಯುವ ಸಮೂಹವನ್ನು ಬಹುದೊಡ್ಡ ಗಂಡಾಂತರದಿಂದ ರಕ್ಷಣೆ ಮಾಡಬೇಕು.

'ಕಾಲೇಜುರಂಗ' ಆಗಸ್ಟ್ ತಿಂಗಳ ಸಂಚಿಕೆ ಬಿಡುಗಡೆಗೊಳಿಸಿದ ಡಾ. ಟಿ.ವಿ. ವಾರುಣಿ ಅಭಿಮತ

# ಸಣ್ಣ ಸುದ್ದಿಯೂ ಪರಿಣಾಮ ಬೀರಬಲ್ಲದು

■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಲೇಖನಿ ಖಡ್ಗಕ್ಕಿಂತ ಹರಿತವಾದದ್ದು. ಖಡ್ಗದಿಂದಲೂ ಸಾಧ್ಯವಾಗದಿರುವುದು ಬರಹದಿಂದ ಸಾಧ್ಯವಾಗುತ್ತದೆ. ಸುದ್ದಿ ಸಣ್ಣದಾದರೂ ಪರಿಣಾಮ ದೊಡ್ಡದು ಎಂದು ಕೊಪ್ಪಳದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥೆ ಡಾ. ಟಿ ವಿ ವಾರುಣಿ ಅಭಿಪ್ರಾಯಪಟ್ಟರು.

ತಾಲೂಕಿನ ಅಳವಂಡಿಯ ಶ್ರೀ ಅಳವಂಡಿ ಶಿವಮೂರ್ತಿಸ್ವಾಮಿ ಇನಾಂದಾರ ಕಟ್ಟಿಮನಿ ಹಿರೇಮಠ ಸರಕಾರಿ ಪ್ರಥಮದರ್ಜೆ ಕಾಲೇಜಿನ ಪತ್ರಿಕೋದ್ಯಮ ವಿಭಾಗದಿಂದ ಪ್ರತಿ ತಿಂಗಳು ಹೊರತರುವ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ 'ಕಾಲೇಜುರಂಗ'ದ ಆಗಸ್ಟ್ ಸಂಚಿಕೆ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪತ್ರಿಕಾವೃತ್ತಿಯಲ್ಲಿ ಸೃಜನಶೀಲತೆಗೆ ಪ್ರಾಧಾನ್ಯತೆಯಿದೆ. ಬೇರೆ ವಿಷಯಗಳಲ್ಲಿ ಕಲಿಕೆ ಮಾತ್ರ ಇರುತ್ತದೆ. ಪತ್ರಿಕೋದ್ಯಮದಲ್ಲಿ ಕಲಿಕೆಯ ಜೊತೆ ಕೌಶಲ್ಯವೂ ಬೇಕು. ಕೌಶಲ್ಯದ ಕಲಿಕೆಯೂ ಈ ಕಾಲೇಜಿನಲ್ಲಿ ಕಾರ್ಯರೂಪಕ್ಕೆ ಬಂದಿರುವುದು ಪ್ರಶಂಸನಾರ್ಹ. ಬದುಕಿನಲ್ಲಿ ಹಣ ಗಳಿಕೆಯೊಂದೇ ಶ್ರೇಷ್ಠವಲ್ಲ. ಅರಿವು, ಅಕ್ಷರ, ಅನ್ನ ನೀಡಿದ ಹೆತ್ತವರ ಋಣ ತೀರಿಸಲಸಾಧ್ಯ. ನಮ್ಮ ರಾಜ್ಯ, ದೇಶದಲ್ಲಿ ವೃದ್ಧಾಶ್ರಮ ಪರಿಕಲ್ಪನೆ ಬೇರುಸಹಿತ ತೊಲಗಬೇಕು. ಗುರು ಹಿರಿಯರನ್ನು ಗೌರವಿಸುವ, ತಂದೆ-ತಾಯಿಯನ್ನು ಪೂಜಿಸುವ ಪರಂಪರೆ ಬೆಳೆಯಬೇಕು ಎಂದು ಅವರು ಕರೆ ನೀಡಿದರು.

ಪತ್ರಿಕೆಯ ಆಗಸ್ಟ್ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿದ ಹಿರಿಯ ಪತ್ರಕರ್ತ ದತ್ತು ಕಮ್ಮಾರ, ಪತ್ರಿಕೋದ್ಯಮಕ್ಕೆ ಸಂಬಂಧಿಸಿದಂತೆ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೂ ತರಗತಿಯಲ್ಲಿ ಕಲಿಯುವುದಕ್ಕೂ ವ್ಯತ್ಯಾಸಗಳಿರುತ್ತವೆ. ಕಲಿಕಾ ಹಂತದಲ್ಲೇ ಪ್ರಾಯೋಗಿಕತೆಗೆ ಒತ್ತು ನೀಡಿ, ವಿದ್ಯಾರ್ಥಿಗಳ ಬರವಣಿಗೆಯನ್ನೇ ಜೀವಾಳವನ್ನಾಗಿಸಿ ಪತ್ರಿಕೆ ಹೊರತರುತ್ತಿರುವುದು ಸಾಮಾನ್ಯ ಸಂಗತಿಯಲ್ಲ ಎಂದರು.

ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಬೋಧಕರು ತಮ್ಮ ಗೌರವಧನದ ಅಲ್ಪಭಾಗವನ್ನು ಈ ಕಾರ್ಯಕ್ಕೆ ವಿನಿಯೋಗಿಸುತ್ತಿರುವುದು ಅವರಲ್ಲಿನ ಕಲಿಸುವ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ವಿದ್ಯಾರ್ಥಿ ಹಂತದಿಂದಲೇ ಮಾತನಾಡುವ, ಬರೆಯುವ ಕೌಶಲ ಬೆಳೆಸಿ, ಧೈರ್ಯ, ಸ್ಫೂರ್ತಿ ತುಂಬುವ ಕೆಲಸ ಬಹುಶಃ ಬೇರೆಲ್ಲೂ ಇಲ್ಲ ಎಂದು ಅಭಿಪ್ರಾಯಪಟ್ಟರು.

ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ನಾಗೇಂದ್ರಪ್ಪ ಬಿ ಅಧ್ಯಕ್ಷತೆ ವಹಿಸಿ ಹಾಗೂ ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಮಲ್ಲಿಕಾರ್ಜುನ ಬ್ಯಾಲಹುಣಸಿ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಬಸವರಾಜ ಕರುಗಲ್ ಮಾತನಾಡಿದರು. ಉಪನ್ಯಾಸಕರಾದ ರವಿ ಹಿರೇಮಠ, ಪ್ರದೀಪ ಪಲ್ಲೇದ್, ಈಶಪ್ಪ ಮೇಟಿ, ಬೋರಯ್ಯ, ವೀರಭದ್ರಪ್ಪ, ವೆಂಕಟೇಶ ಎಸ್., ಹಸೀನಾಭಾನು, ಸಿದ್ದು ಕಡ್ಲೆಕೊಪ್ಪ, ಮಹೇಶ, ದೈಹಿಕ ಶಿಕ್ಷಣ ನಿರ್ದೇಶಕ ಸಿದ್ದಾಚಾರಿ ಬಡಿಗೇರ, ಗ್ರಂಥಪಾಲಕಿ ಗೌತಮಿ, ಬೋಧಕೇತರ ಸಿಬ್ಬಂದಿ ಹನುಮವ್ವ, ದುರ್ಗಪ್ಪ, ವೀರಣ್ಣ ಪೂಜಾರ, ಕಾಲೇಜಿನ ವಿದ್ಯಾರ್ಥಿಗಳು ಇದ್ದರು. ಡಾ. ಟಿ ವಿ ವಾರುಣಿ ಹಾಗೂ ಹಿರಿಯ ಪತ್ರಕರ್ತ ದತ್ತು ಕಮ್ಮಾರ ಅವರನ್ನು ಕಾಲೇಜಿನ ಪರವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಇಂದಿರಾ ನಿರೂಪಿಸಿದರು. ಕೊಟ್ರಮ್ಮ ಸ್ವಾಗತಿಸಿದರು. ಸಹನಾಬೇಗಂ ಮತ್ತು ಪೂಜಾ ಅತಿಥಿಗಳನ್ನು ಪರಿಚಯಿಸಿದರು. ಉಪನ್ಯಾಸಕ ವಿಜಯಕುಮಾರ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಣ್ಣಯ್ಯ ಹಿರೇಮಠ, ಶಿವಮ್ಮ ಅನಿಸಿಕೆ ಹಂಚಿಕೊಂಡರು. ಅಂಜಲಿ ವಂದಿಸಿದರು.



ಕಾಲೇಜುರಂಗ ಆಯೋಜಿಸಿದ್ದ 'ನಾನು, ನನ್ನ ದೇಶ' ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ಕಾಲೇಜಿನ ಬಿಎ ವಿದ್ಯಾರ್ಥಿನಿ ಮಲ್ಲಮ್ಮ ಹೂವಿನಾಳ ಬರೆದ ಪ್ರಬಂಧಕ್ಕೆ ಪ್ರಥಮ ಬಹುಮಾನ ಲಭಿಸಿದ್ದು, ಬಹುಮಾನದ ಪ್ರಾಯೋಜಕರಾದ ಸಹಾಯಕ ಪ್ರಾಧ್ಯಾಪಕ ಮಲ್ಲಿಕಾರ್ಜುನ ಬ್ಯಾಲಹುಣಸಿ ಪುಸ್ತಕದೊಂದಿಗೆ ನಗದು ಬಹುಮಾನ ವಿತರಿಸಿದರು. ಶಿವಮ್ಮ ದ್ವಿತೀಯ ಹಾಗೂ ಯಶೋಧಾ ತೃತೀಯ ಸ್ಥಾನ ಗಳಿಸಿ, ಪುಸ್ತಕ ಬಹುಮಾನ ಹಾಗೂ ಪ್ರಬಂಧ ಪ್ರಕಟಣೆಯ ಗೌರವ ಪಡೆದರು. ವಿದ್ಯಾರ್ಥಿಗಳಾದ ಗವಿಸಿದ್ದಮ್ಮ, ಕೊಟ್ರಮ್ಮ, ಅಂಜಲಿ ಹಾಗೂ ಸಿದ್ದನಗೌಡ ಬರೆದ ಪ್ರಬಂಧಗಳು ಮೆಚ್ಚುಗೆ ಗಳಿಸಿದ್ದು, ಪುಸ್ತಕ ಬಹುಮಾನ ವಿತರಿಸಲಾಯಿತು.

> ಸುದ್ದಿ ಮತ್ತು ಜಾಹೀರಾತು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಂದನ್ನು ಬಿಟ್ಟು ಇನ್ನೊಂದು ನಡೆಯದು. ಕಾಲೇಜಿನ ವಿದ್ಯಾರ್ಥಿಗಳಿಗೆ ಕಾಲೇಜುರಂಗ ಪತ್ರಿಕೆ ಉಚಿತವಾಗಿ ಕೈ ಸೇರುತ್ತಿದೆ ಎಂದರೆ ಅದರ ಹಿಂದಿನ ಪರಿಶ್ರಮ ಕರ್ತೃಗಳಿಗೆ ಮಾತ್ರ ಗೊತ್ತಿರುತ್ತದೆ. ಪುಕ್ಕಟೆ ಸಿಗುತ್ತದೆ ಎಂದು ಉದಾಸೀನ ಮಾಡಬೇಡಿ. ಅದರ ಹಿಂದಿನ ಶ್ರಮ ಅರ್ಥೈಸಿಕೊಂಡು ಸದ್ಬಳಕೆ ಮಾಡಿಕೊಂಡು ಕಾಲೇಜಿಗೆ ಸಾರ್ಥಕತೆ ತಂದುಕೊಡಿ.
>
> – ದತ್ತು ಕಮ್ಮಾರ.
> ಹಿರಿಯ ಪತ್ರಕರ್ತರು.

# ಉಡುಪಿ ಕಾಲೇಜಿಗೂ ಕಾಂಗ್ರೆಸ್ ಪಕ್ಷಕ್ಕೂ ಸಂಬಂಧವಿಲ್ಲ

■ ವಿಜಯಸಾಕ್ಷಿ ಸುದ್ದಿ, ಗದಗ

ಉಡುಪಿ ಕಾಲೇಜಿಗೂ, ಕಾಂಗ್ರೆಸ್ ಪಕ್ಷಕ್ಕೂ ಏನೂ ಸಂಬಂಧವಿಲ್ಲ. ಉಡುಪಿಯ ಕಾಲೇಜೊಂದರ ವಿದ್ಯಾರ್ಥಿನಿಯರ ಶೌಚಾಲಯದಲ್ಲಿ ಹಿಡನ್ ಕ್ಯಾಮರಾ ಮೂಲಕ ವಿಡಿಯೋ ಸೆರೆ ಹಿಡಿಯಲಾಗಿತ್ತೆಂಬ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಈ ಪ್ರಕರಣದ ಸಾಕ್ಷಿ ನಾಶ ಮಾಡಿಸಿದ್ದು, ಬಿಜೆಪಿ ಸರ್ಕಾರವೇ ಇದಕ್ಕೆ ಕಾರಣ ಎಂದು ಗದಗ ಜಿಲ್ಲಾ ಕಾಂಗ್ರೆಸ್ ವಕ್ತಾರ ಜಿ ಡಿ ಕಳಸಾಪೂರ ಪತ್ರಿಕಾ ಪ್ರಕಟಣೆಯ ಮೂಲಕ ಆರೋಪಿಸಿದ್ದಾರೆ.

ಕಾಂಗ್ರೆಸ್ ಪಕ್ಷದ ಹೆಸರು ಕೆಡಿಸಲು ವಿನಾಕಾರಣ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಯತ್ನಿಸುತ್ತಿರುವುದು ಖಂಡನೀಯ. ಮಣಿಪುರದಲ್ಲಿ ಒಬ್ಬ ಮಹಿಳೆಯ ಬೆತ್ತಲೆ ಮೆರವಣಿಗೆ ಮಾಡಿದರೆ, ನಮ್ಮ ದೇಶದ ಪ್ರದಾನಿ ಮಂತ್ರಿ ನರೇಂದ್ರ ಮೋದಿಯವರು ಒಂದು ಮಾತನ್ನೂ ಆಡಿಲ್ಲವೇಕೆ? ಈ ದೌರ್ಜನ್ಯ ಪ್ರಕರಣ ದೇಶವೇ ತಲೆ ತಗ್ಗಿಸುವಂತಹದ್ದು. ಹಾಗಿದ್ದರೂ, ಉಡುಪಿ ಪ್ರಕರಣವನ್ನು ಬಿಜೆಪಿ ರಾಜಕೀಯ ಮಾಡುತ್ತಿದೆ. ಕಳೆದ ವಿಧಾನಸಬಾ ಚುನಾವಣೆಯಲ್ಲಿನ ಹೀನಾಯ ಸೋಲು ಬಿಜೆಪಿ ಮುಖಂಡರಿಗೆ ಹತಾಶೆ ಉಂಟುಮಾಡಿದ್ದು, ಇಂತಹ ಇಲ್ಲಸಲ್ಲದ ಆರೋಪವನ್ನು ಮಾಡುತ್ತಿದೆ ಎಂದು ಅವರು ಖಂಡಿಸಿದ್ದಾರೆ.



# ಗೃಹಲಕ್ಷ್ಮಿ ಅರ್ಜಿ ಸಲ್ಲಿಕೆ ಸಮಸ್ಯೆ ಪರಿಹರಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಸರ್ಕಾರದಿಂದ ಜಾರಿಗೆ ತಂದಿರುವ ಗೃಹಲಕ್ಷ್ಮೀ ಯೋಜನೆಗೆ ಅರ್ಜಿ ಹಾಕಲು ಪ್ರತಿನಿತ್ಯ ಹಲವಾರು ಸಮಸ್ಯೆಗಳು ಉಂಟಾಗುತ್ತಿದೆ. ಆದ್ದರಿಂದ, ಗೃಹಲಕ್ಷ್ಮೀ ಯೋಜನೆಗೆ ಅರ್ಜಿ ಸಲ್ಲಿಸಲು ಮಹಿಳೆಯರಿಗೆ ಆಗುತ್ತಿರುವ ಸಮಸ್ಯೆಗಳನ್ನು ಸರಿಪಡಿಸುವಂತೆ ಒತ್ತಾಯಿಸಿ ಗದಗ ಜಿಲ್ಲಾ ಸ್ಲಂ ಮಹಿಳಾ ಸಮಿತಿ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಗದಗ ಜಿಲ್ಲಾ ಸ್ಲಂ ಸಮಿತಿ ಅಧ್ಯಕ್ಷ ಇಮ್ತಿಯಾಜ ಆರ್ ಮಾನ್ವಿ ಮಾತನಾಡಿ, ಮಹಿಳೆಯರು ಪ್ರತಿ ನಿತ್ಯ ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಬೆಳಿಗ್ಗೆಯಿಂದ ಸಂಜೆಯವರೆಗೂ ಸರತಿ ಸಾಲಿನಲ್ಲಿ ನಿಲ್ಲುತ್ತಿದ್ದಾರೆ. ಹಲವೆಡೆ ಸರ್ವರ್ ಸಮಸ್ಯೆಯಿಂದ ನೋಂದಣೆ ಕಾರ್ಯ ಸ್ಥಗಿತಗೊಂಡು ಗಂಟೆಗಟ್ಟಲೇ ಕಾಯುವಂತಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹತ್ವದ ಯೋಜನೆ ಜಾರಿಗೆ ತಂದು, ಗೃಹಲಕ್ಷ್ಮೀ ಯೋಜನೆಗೆ ಅರ್ಜಿ ಸಲ್ಲಿಸಲು ಯಾವುದೇ ರೀತಿಯ ತೊಂದರೆ ಆಗಬಾರದೆಂದು ಆಶಿಸಿದ್ದಾರೆ.

ಈ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ಅರ್ಜಿ ಸಲ್ಲಿಸಲು ಯಾವುದೇ ತೊಂದರೆ ಆಗದಂತೆ ಸರಳೀಕರಣಗೊಳಿಸಬೇಕೆಂದು ಮನವಿಯ ಮೂಲಕ ಆಗ್ರಹಿಸಿದರು. ಈ ಸಂದರ್ಭದಲ್ಲಿ ಸ್ಲಂ ಸಮಿತಿ ಉಪಾಧ್ಯಕ್ಷ ರವಿಕುಮಾರ ಬೆಳಮಕರ, ಪ್ರಗತಿಪರ ಹೋರಾಟಗಾರ ಗವಿಸಿದ್ದಯ್ಯ ಹಿರೇಮಠ, ಮಹಿಳಾ ಸಮಿತಿ ಸಂಚಾಲಕಿ ಮೆಹರುನಿಸಾ ಢಾಲಾಯತ, ಫಾತಿಮಾ ಸೈಯದ, ಚಂದ್ರಿಕಾ ರೋಣದ, ಅಫ್ರೋಜಾ ಹುಬ್ಬಳ್ಳಿ, ಸುಶೀಲಮ್ಮ ಗೊಂದರ, ಫೈರುಜಾ ಹುಬ್ಬಳ್ಳಿ, ಮೆಹರುನಿಸಾ ಡಂಬಳ, ತಿಪ್ಪಮ್ಮ ಕೊರವರ, ಕೌಸರ ಬೈರಕದಾರ, ವಿಶಾಲಾಕ್ಷಿ ನರೇಗಲ್ಲ, ಮೈಮುನಾ ಬೈರಕದಾರ, ಪೀರಮ್ಮ ನದಾಫ, ಜೈತುನಬಿ ಶಿರಹಟ್ಟಿ, ಲಕ್ಷ್ಮೀ ಮಣಿವಡ್ಡರ, ಶೋಭಾ ಹಿರೇಮಠ, ದಾವಲಬಿ ಕೌತಾಳ, ದಾವಲ ಯಾದಗೇರಿ ಹಾಗೂ ಗದಗ-ಬೆಟಗೇರಿ ಸ್ಲಂ ಪ್ರದೇಶದ ನೂರಾರು ಮಹಿಳೆಯರು ಉಪಸ್ಥಿತರಿದ್ದರು.




# ಮನೋರಮಾ ಕಾಲೇಜು ರಂಗೋಲಿ ಸ್ಪರ್ಧೆ

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮನೋರಮಾ ಕಾಲೇಜಿನಲ್ಲಿ ವಿದ್ಯಾರ್ಥಿನಿಯರಿಗೆ ಪ್ರೊ. ಶಾಹಿದಾ ಶಿರಹಟ್ಟಿ ಹಾಗೂ ಪ್ರೊ. ರೇಣುಕಾ ಪಾಟೀಲರ ನೇತೃತ್ವದಲ್ಲಿ ರಂಗೋಲಿ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ನಿರ್ಣಾಯಕರಾಗಿ ಪ್ರೊ. ಮೇನಕಾ ತುಮ್ಮರಮಟ್ಟಿ ರಂಗೋಲಿಗಳನ್ನು ವೀಕ್ಷಿಸಿ, ವಿಜೇತರನ್ನು ಘೋಷಿಸಿದರು.

ಪಿಯುಸಿ ವಿಭಾಗದಲ್ಲಿ- ಪ್ರಥಮ-ಅಮೂಲ್ಯಾ ಹಬೀಬ, ದ್ವಿತಿಯ-ಪೂರ್ಣಿಮಾ ಮುಳಗುಂದಮಠ, ತೃತಿಯ ಯಾಸ್ಮಿನ ಹಾಗೂ ತಸ್ಲಿಮ, ಬಿಸಿಎ ವಿಭಾಗದಲ್ಲಿ ಪ್ರಥಮ-ಹರಿಪ್ರಿಯಾ ಎಸ್, ದ್ವಿತೀಯ-ಪ್ರತಿಮಾ ಮುದ್ದೋಳ ಹಾಗೂ ರಾಜೇಶ್ವರಿ, ತೃತೀಯ-ಅಕ್ಷತಾ ಹಿರೇಮಠ, ಬಿಕಾಂ ವಿಭಾಗದಲ್ಲಿ ಪ್ರಥಮ ಶ್ವೇತಾ ನರಸಾಪೂರ, ದ್ವಿತೀಯ-ಶ್ವೇತಾ ಹಾಗೂ ಶ್ರೀದೇವಿ, ತೃತೀಯ-ಯಶೋಧಾ ಹಾಗೂ ಪೂನಂ ಪಡೆದುಕೊಂಡರು.

ಸಭೆಯ ಅಧ್ಯಕ್ಷತೆಯನ್ನು ಸಂಸ್ಥೆಯ ಚೇರಮನ್ ಎನ್ ಎಮ್ ಕುಡತರಕರ ವಹಿಸಿದ್ದರು. ಈ ಸಂದರ್ಭದಲ್ಲಿ ಪ್ರಾಚಾರ್ಯ ಬಿ ಎಸ್ ಹಿರೇಮಠ, ಆಡಳಿತಾಧಿಕಾರಿ ಕಿಶೋರ ಮುದಗಲ್ಲ, ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಕುಡತರಕರ, ಸಂಜಯಕುಮಾರ ಕುಡತರಕರ, ಚೇತನ ಕುಡತರಕರ, ಸಹ ಸಂಯೋಜಕರಾದ ಪ್ರೊ. ನಿವೇದಿತಾ ಪೊಲೀಸಪಾಟೀಲ, ಪ್ರೊ. ಸವಿತಾ ಪೂಜಾರ, ಪಿಯುಸಿ ಸಹಸಂಯೋಜಕ ಪ್ರೊ. ರಾಘವೇಂದ್ರ ನವಲಗುಂದ, ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



# ಉಡುಪಿ ಕಾಲೇಜು ವಾಶ್‌ರೂಮ್ ವಿಡಿಯೋ ಪ್ರಕರಣ: ತ್ವರಿತವಾಗಿ ಎಫ್‌ಎಸ್‌ಎಲ್ ವರದಿ ಕೇಳಿದ ಪೊಲೀಸರು!

■ ವಿಜಯಸಾಕ್ಷಿ ಸುದ್ದಿ, ಉಡುಪಿ

ಉಡುಪಿಯ ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ವಯೋರಿಸಂ ಪ್ರಕರಣದ ತನಿಖೆ ಮುಂದುವರಿದಿದ್ದು, ಎಫ್‌ಎಸ್‌ಎಲ್ ತಜ್ಞರು ತಮ್ಮ ವರದಿಯನ್ನು ಸಲ್ಲಿಸಲು ಆಗಸ್ಟ್ 25ರವರೆಗೆ ಕಾಲಾವಕಾಶ ಕೋರಿದ್ದಾರೆ. ಆದಾಗ್ಯೂ ಪೊಲೀಸರು ತ್ವರಿತವಾಗಿ ಎಫ್‌ಎಸ್‌ಎಲ್ ವರದಿ ನೀಡುವಂತೆ ಕೇಳಿದ್ದು, ತ್ವರಿತವಾಗಿ ವರದಿ ಸಿಕ್ಕರೆ ಇದು ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಲು ಸಾಧ್ಯವಾಗುತ್ತದೆ ಎಂದು ಹೇಳಿದ್ದಾರೆ.

ಏತನ್ಮಧ್ಯೆ, ಪ್ರಕರಣದ ಮೂವರು ಆರೋಪಿ ಹುಡುಗಿಯರು ಕಾಲೇಜಿನ ವಾಶ್‌ರೂಮ್‌ನೊಳಗೆ ತಮ್ಮ ಸಹಪಾಠಿಗಳ ವೀಡಿಯೊ ರೆಕಾರ್ಡ್ ಮಾಡುವ ಮೂಲಕ ತಮಾಷೆ ಮಾಡುವುದನ್ನು ಬಿಟ್ಟು ಬೇರೆ ಯಾವುದೇ ಉದ್ದೇಶವನ್ನು ಹೊಂದಿದ್ದಾರೆಯೇ ಎಂದು ಪೊಲೀಸರು ತಮ್ಮ ತನಿಖೆಯನ್ನು ಕೇಂದ್ರೀಕರಿಸಿದ್ದಾರೆ.

# ಸಂತೃಪ್ತಿಗಿಂತ ಮಿಗಿಲಾದ ಸಂಪತ್ತಿಲ್ಲ: ರಂಭಾಪುರಿ ಶ್ರೀಗಳು

■ ವಿಜಯಸಾಕ್ಷಿ ಸುದ್ದಿ, ಬಾಳೆಹೊನ್ನೂರು

ಮನುಷ್ಯನ ಮನಸ್ಸು ಸಿರಿವಂತವಾದರೆ, ಯಾವುದೇ ಸಂಪತ್ತು ಇಲ್ಲದಿದ್ದರೂ ನಾವು ಸಿರಿವಂತರೇ. ಮನಸ್ಸು ಬಡವಾಗಿದ್ದರೆ ನಮ್ಮಲ್ಲಿ ಎಷ್ಟೇ ಸಂಪತ್ತು ಇದ್ದರೂ ಬಡವರೇ. ಆದ್ದರಿಂದ, ಸಂತೃಪ್ತಿಗಿಂತ ಮಿಗಿಲಾದ ಸಂಪತ್ತು ಮತ್ತೊಂದಿಲ್ಲ ಎಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶ್ರೀ ರಂಭಾಪುರಿ ಪೀಠದಲ್ಲಿ ಪೌರ್ಣಿಮಾ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಮನುಷ್ಯನ ಸಂತೋಷಕ್ಕೆ ಎರಡು ದಾರಿಗಳಿವೆ. ಪರಿಸ್ಥಿತಿಯನ್ನು ಬದಲಾಯಿಸಿಕೊಳ್ಳಬೇಕು. ಇಲ್ಲವೇ ನಮ್ಮ ಆಲೋಚನೆಗಳನ್ನು ಬದಲಾಯಿಸಿಕೊಳ್ಳಬೇಕು. ಮಾಡಿದ ಸಹಾಯ, ಗಳಿಸಿದ ವಿಶ್ವಾಸ, ಬೆಳೆಸಿದ ಸ್ನೇಹ, ಉಳಿಸಿಕೊಂಡ ನಂಬಿಕೆ ನಮ್ಮೊಂದಿಗೆ ಕೊನೆಯತನಕ ಇರುತ್ತವೆ. ಹಣ ಇದ್ದರೆ ಶತ್ರು ಸಹ ಮಿತ್ರನಾಗುತ್ತಾನೆ. ಕೊಟ್ಟ ಸಾಲ ಕೇಳಿದರೆ ಮಿತ್ರ ಸಹ ಶತ್ರುವಾಗುತ್ತಾನೆ ಎಂಬ ಮಾತು ಸತ್ಯವಾದುದು ಎಂದರು.

ಇದೇ ಸಂದರ್ಭದಲ್ಲಿ ಆಗಸ್ಟ್ 'ರಂಭಾಪುರಿ ಬೆಳಗು' ಮಾಸಪತ್ರಿಕೆಯನ್ನು ಶ್ರೀಗಳು ಬಿಡುಗಡೆಗೊಳಿಸಿದರು. ದಾವಣಗೆರೆ ತಾಲೂಕಿನ ನಾಗರಸನಹಳ್ಳಿ ಗ್ರಾಮದ ವಿರೇಶ-ವಿಶಾಲಾಕ್ಷಮ್ಮ ದಂಪತಿಗಳು ಶ್ರೀ ರಂಭಾಪುರಿ ಪೀಠಕ್ಕೆ ಗೋದಾನ ಮಾಡಿ ಆಶೀರ್ವಾದ ಪಡೆದರು. ಕೊಟ್ಟೂರಿನ ನೀಲಕಂಠಯ್ಯ, ದಾವಣಗೆರೆ, ಶಿವಮೊಗ್ಗ ಮತ್ತು ನಾಗರಸನಹಳ್ಳಿ ಸದ್ಭಕ್ತರು ಪಾಲ್ಗೊಂಡಿದ್ದರು. ಪ್ರಾತಃಕಾಲ ಶ್ರೀ ಜಗದ್ಗುರು ರೇಣುಕಾಚಾರ್ಯ, ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ, ಶ್ರೀ ಸೋಮೇಶ್ವರ ಮಹಾಲಿಂಗಕ್ಕೆ ಪೌರ್ಣಿಮೆ ನಿಮಿತ್ತ ವಿಶೇಷ ಪೂಜೆ ಜರುಗಿತು.



ಮಲ್ಲಿಕಾರ್ಜುನ ಖಂಡಮ್ಮನವರ ದಂಪತಿಗಳಿಗೆ 'ಆದರ್ಶ ದಂಪತಿ 2023-24' ಪ್ರಶಸ್ತಿ ಪ್ರದಾನ

# ಮಲ್ಲಿಕಾರ್ಜುನರ ಕನ್ನಡ ಸೇವೆ ಶ್ಲಾಘನೀಯ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಮಲ್ಲಿಕಾರ್ಜುನ ಖಂಡಮ್ಮನವರು ಬಸವಣ್ಣನವರ ಅನುಯಾಯಿಯಾಗಿದ್ದು, ಬಸವತತ್ವಗಳ ಅಡಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಕಾಯಕವೇ ಕೈಲಾಸ ಎಂಬ ನಂಬಿಕೆಯನ್ನು ಇಟ್ಟುವರು. ಇಂದಿನ ಯುವಕರಿಗೆ ಬಸವತತ್ವಗಳ ಕುರಿತು ತಮ್ಮದೇ ಆದ ಶೈಲಿಯಲ್ಲಿ ಪ್ರಚಾರ ಮಾಡುತ್ತ, ಪ್ರತೀ ವಾರ ಶಿವಾನುಭವ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿರುವುದು ಹೆಮ್ಮೆಯ ಸಂಗತಿ ಎಂದು ಅಕ್ಷರದೀಪ ಫೌಂಡೇಶನ್‌ನ ಬೆಳಗಾವಿ ಘಟಕದ ಅಧ್ಯಕ್ಷೆ ರೋಹಿಣಿ ಮಿರ್ಜೆ ಸಂತಸ ವ್ಯಕ್ತಪಡಿಸಿದರು.

ಅಕ್ಷರ ದೀಪದ ಅಧ್ಯಕ್ಷ ಪ್ರವೀಣಕುಮಾರ ಕನ್ಯಾಳ ಮಾತನಾಡಿ, ಮಲ್ಲಿಕಾರ್ಜುನ ಖಂಡಮ್ಮನವರ ಕನ್ನಡಾಭಿಮಾನಿಯಾಗಿದ್ದು, ತಮ್ಮ ಇಳಿ ವಯಸ್ಸಿನಲ್ಲಿನಲ್ಲಿಯೂ ತಮ್ಮದೇ ಆದ ರೀತಿಯಲ್ಲಿ ಕನ್ನಡ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇವರ ಧರ್ಮಪತ್ನಿ ಅನುಸೂಯಾರವರು ಶ್ರೀಯುತರ ಎಲ್ಲ ಕಾರ್ಯಗಳಿಗೆ ಸದಾ ಪ್ರೋತ್ಸಾಹ ನೀಡುತ್ತಿದ್ದಾರೆ. ಇಂತಹ ಆದರ್ಶ ದಂಪತಿಗಳಿಗೆ ನಮ್ಮ ವೇದಿಕೆಯಿಂದ ಪ್ರಶಸ್ತಿ ನೀಡುತ್ತಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದರು.

ಇತ್ತೀಚೆಗೆ ಅಕ್ಷರದೀಪ ಫೌಂಡೇಶನ್ ಸಾಹಿತ್ಯ ಮತ್ತು ಸಾಂಸ್ಕೃತಿಕ ಕವಿ ಕಾವ್ಯ ಸಂಗಮವು ಧಾರವಾಡದ ರಂಗಾಯಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯ ಮಟ್ಟದ 'ಆದರ್ಶ ದಂಪತಿಗಳು-2023' ಪ್ರಶಸ್ತಿಯನ್ನು ಕಳಸಾಪುರದ ಮಲ್ಲಿಕಾರ್ಜುನ ಖಂಡಮ್ಮನವರ ದಂಪತಿಗಳಿಗೆ ನೀಡಿ ಸನ್ಮಾನಿಸಿ, ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಲಿಂಗರಾಜು ಅಂಗಡಿ ವೇದಿಕೆಯಲ್ಲಿದ್ದರು.

ಮುಖ್ಯ ಅತಿಥಿಗಳಾಗಿ ನಾಜಿಯಾಬೇಗಂ ನೂರಭಾಷಾ, ಜಯಶ್ರೀ ಚುನಮರಿ, ಎಸ್ ಐ ಕುಲಕರ್ಣಿ ಉಪಸ್ಥಿತರಿದ್ದರು. ಡಾ. ಸುಮಾ ಬಸವರಾಜ ಹಡಪದ ಇವರಿಂದ ಪ್ರಾರ್ಥನೆ ಜರುಗಿತು. ಭಾರತಿ ಕೋರೆ ಸ್ವಾಗತಿಸಿದರು.



ಸುರ್ವೆ ಕಲ್ಚರಲ್ ಅಕಾಡೆಮಿಯ 31ನೇ ವರ್ಷದ ವಾರ್ಷಿಕೋತ್ಸವ ಆ.11ಕ್ಕೆ

# ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ 6ನೇ ಮಾಲಿಕೆ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಗಸ್ಟ್ 11ರಂದು ಸುರ್ವೆ ಕಲ್ಚರಲ್ ಅಕಾಡೆಮಿಯ 31ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ 6ನೇ ಮಾಲಿಕೆಯಾಗಿ, ಡಾ. ಯು.ಆರ್. ಅನಂತಮೂರ್ತಿ ರಾಷ್ಟ್ರೀಯ ಕಲಾ ಪ್ರತಿಭೋತ್ಸವ ಕಾರ್ಯಕ್ರಮ ಹಮ್ಮಿಕೊಂಡಿದೆ. ಈ ಕಾರ್ಯಕ್ರಮಕ್ಕೆ ಪುಸ್ತಕಮನೆ ಹರಿಹರಪ್ರಿಯರವರನ್ನು ಸರ್ವಾಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ.

ಡಾ. ಯು ಆರ್ ಅನಂತಮೂರ್ತಿ ಜೀವನ, ಬದುಕು-ಬರಹ ಕುರಿತು ವಿಚಾರ ಸಂಕಿರಣ ಮತ್ತು ಉಪನ್ಯಾಸಗಳನ್ನು ಹಮ್ಮಿಕೊಂಡಿದ್ದು, ಸಾಹಿತಿಗಳಾದ ಸಿದ್ಧರಾಮ ಹೊನ್ಕಲ್ ಶಹಪೂರ, ರಾಜೇಂದ್ರ ಎಸ್ ಗಡಾದ ಗದಗ, ಪತ್ರಕರ್ತ ಬಾಬು ದಿನಕರ್ ಬೆಂಗಳೂರು ಇವರು ವಿಚಾರ ಸಂಕಿರಣದಲ್ಲಿ ವಿವಿಧ ವಿಷಯಗಳನ್ನು ಮಂಡಿಸಲಿದ್ದಾರೆ.

ಇದೇ ಸಂದರ್ಭದಲ್ಲಿ, ನೃತ್ಯ ಸ್ವರಾಲಯ ಮಾಲೂರು ಮತ್ತು ನೃತ್ಯೋಪಾಸನ ಕಲಾ ಕುಟೀರ ಬೆಂಗಳೂರು, ಶ್ರೇಯಾ ಡ್ಯಾನ್ಸ್ ಅಕಾಡೆಮಿ ಮಾಲೂರು, ವಿಷ್ಣುಪ್ರಿಯ ನಾಟ್ಯಾಲಯ ಬೆಂಗಳೂರು ಮಕ್ಕಳಿಂದ ಭರತನಾಟ್ಯ, ಜಾನಪದ ನೃತ್ಯ, ಚಲನಚಿತ್ರ ನೃತ್ಯ, ನೃತ್ಯರೂಪಕ ಮತ್ತು ಸಮೂಹ ನೃತ್ಯಗಳ ಪ್ರದರ್ಶನ ನೀಡಲಿದ್ದಾರೆ.

ಜನಪದ ಸಿರಿ ಸಂಭ್ರಮ ಮತ್ತು ಜನಪದ ಸಿರಿ ಸಂಗಮದಲ್ಲಿ ಉತ್ತರ ಕರ್ನಾಟಕದ ಜನಪದ ಕಲಾವಿದರು ಜಾನಪದ, ತತ್ವಪದ, ಸಂಪ್ರದಾಯ, ಸೋಬಾನೆ, ಭಜನೆ, ದೊಡ್ಡಾಟ ಪದಗಳ ರಂಗ ಗೀತೆಗಳ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ.

ಜನಪದ ಅಕಾಡೆಮಿಯ ಮಾಜಿ ಸದಸ್ಯ ನಾರಾಯಣಪ್ಪ ಮಾಡಸಿರಿವಾರ ಸಿಂಧನೂರು ಮತ್ತು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮಲ್ಲಪ್ಪ ಗವಾಯಿಗಳು ಈ ಜನಪದ ಕಾರ್ಯಕ್ರಮಗಳ ನೇತೃತ್ವ ವಹಿಸಿದ್ದಾರೆಂದು ಸಂಸ್ಥೆಯ ಸ್ಥಾಪಕ ಅಧ್ಯಕ್ಷ ರಮೇಶ ಸುರ್ವೆ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಡಾ. ಯು ಆರ್ ಅನಂತಮೂರ್ತಿ ಅವರ ಕಾದಂಬರಿ ಕುರಿತು ಅಂಕಣಕಾರ್ತಿ ಡಿ. ನಳಿನ ಚಿಕ್ಕಮಗಳೂರು, ಕವಿತೆಗಳ ಕುರಿತು ಹಾಸನದ ಗೋರೂರು ಪಂಕಜಾ, ಕಥೆಗಳ ಕುರಿತು ಬೆಂಗಳೂರಿನ ವಿಜಯ ಕಾಲೇಜಿನ ಪ್ರಾಧ್ಯಾಪಕ ಡಾ. ಬಿ ಸಿ ರಾಜಕುಮಾರ್ ಉಪನ್ಯಾಸ ನೀಡಲಿದ್ದಾರೆ. 68ನೇ ಸಾಂಸ್ಕೃತಿಕ ಪ್ರತಿಭೋತ್ಸವ ಹಾಗೂ 7ನೇ ರಾಷ್ಟ್ರೀಯ ನೃತ್ಯ ಕಲಾಮೇಳದಲ್ಲಿ ಮಾಲೂರಿನ ಶ್ರೇಯಾ, ಬೆಂಗಳೂರಿನ ತನುಶ್ರೀ ಎನ್. ಭರತನಾಟ್ಯ ಪ್ರದರ್ಶನ ನೀಡಲಿದ್ದಾರೆ. ಗೋವಾದ ತಮ್ಮಣ್ಣ ಭಜಂತ್ರಿ ಮತ್ತು ಉಡುಪಿಯ ಶಬರಿ ಇವರಿಂದ ಕರೋಕೆ ಗಾನಮಂಜರಿ ಮತ್ತು ಗಾನಸುಧೆ ಕಾರ್ಯಕ್ರಮ ನಡೆಯಲಿದೆ.

# ಭದ್ರಾವತಿ ಜನರ ಹೋರಾಟಕ್ಕೆ ಸಿಕ್ಕ ಜಯ: VISL ಕಾರ್ಖಾನೆ ಆರಂಭಕ್ಕೆ ಕೇಂದ್ರ ಒಪ್ಪಿಗೆ; ಚುನಾವಣೆ ಹೊಸ್ತಿಲಲ್ಲಿ ಟ್ರಿಕ್!

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

1918ರಲ್ಲಿ ಮೊದಲ ಮಹಾಯುದ್ಧದ ಅಂತ್ಯದ ವೇಳೆಗೆ ಶಿವಮೊಗ್ಗದ ಭದ್ರಾವತಿಯಲ್ಲಿ ಮೈಸೂರು ರಾಜಮನೆತನದಿಂದ ಆರಂಭಗೊಂಡ ಐತಿಹಾಸಿಕ ಉಕ್ಕಿನ ತಯಾರಿಕಾ ಕಾರ್ಖಾನೆಯು ಕೆಲವೇ ದಿನಗಳಲ್ಲಿ ಪುನರಾರಂಭವಾಗಲಿದೆ.

ಭಾರತೀಯ ಉಕ್ಕು ಪ್ರಾಧಿಕಾರ ನಿಯಮಿತದ (ಖಂಭಐ) ಆಡಳಿತ ಮಂಡಳಿ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯಲ್ಲಿ ಉತ್ಪಾದನೆಗೆ ಅನುಮತಿ ನೀಡಿದೆ. ಇದೇ ತಿಂಗಳು ಅಂದರೆ ಆಗಸ್ಟ್ 10ಕ್ಕೆ ಎರಡು ಪಾಳಿಗಳಲ್ಲಿ ಕಾರ್ಖಾನೆ ಶುರುವಾಗಲಿದೆ.

ಎಲ್ಲಾ ನಿರ್ವಹಣೆ ಮತ್ತು ಸೇವಾ ಇಲಾಖೆಗಳು ಕಾರ್ಯಾಚರಣೆ ಪುನರಾರಂಭಿಸಲು ಅಗತ್ಯ ವ್ಯವಸ್ಥೆಗಳನ್ನು ಮಾಡಲು ಪ್ರಾರಂಭಿಸಬೇಕಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಸ್ಥಾವರದ ಆದೇಶದಲ್ಲಿ, ಆಗಸ್ಟ್ 7 ರ ಮುಂಚಿತವಾಗಿ ಮೊದಲು ಎಲ್ಲಾ ಟ್ರಯಲ್ ಕಾರ್ಯಾಚರಣೆಗಳನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಿದೆ. ಆರ್ಥಿಕ ಕಾರಣಗಳಿಂದಾಗಿ ಭದ್ರಾವತಿ ಉಕ್ಕು ಕಾರ್ಖಾನೆ ಮುಚ್ಚಲಾಗಿತ್ತು. ಈ ವರ್ಷದ ಫೆಬ್ರವರಿಯಲ್ಲಿ ಸಂಸತ್ತಿನಲ್ಲಿ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ಅಧಿಕೃತ ಹೇಳಿಕೆ ನೀಡಿದ್ದು, "ಹೆಚ್ಚಿನ ಉತ್ಪಾದನಾ ವೆಚ್ಚ ಕಡಿಮೆ ಪ್ರಮಾಣದ ಉತ್ಪಾದನೆ ಮತ್ತು ಅದಿರು ಗಣಿ ಕೊರತೆಯಿಂದಾಗಿ VISL ಮುಚ್ಚಲಾಗಿದೆ ಎಂದು ಘೋಷಿಸಿದ್ದರು.


## ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545



ವಾರ್ಡ್ ನಂ.27ರ ನಗರಸಭಾ ಸದಸ್ಯೆ ಲಲಿತಾ ಬ ಅಸೂಟಿ ಇವರ ನೇತೃತ್ವದಲ್ಲಿ ಸ್ಟೇಡಿಯಂ ಭಾಗದಲ್ಲಿ ಪ್ರಜಾಪ್ರತಿನಿಧಿಗಳಾದ ಶ್ರೀಮತಿ ಗೌರವ ಹುಣಸಿಕಟ್ಟಿ, ಭಾರತಿ ಗೌಡರ ನೀಲವ್ವ ಮಳಗಿ ಇವರ ಸಹಕಾರದೊಂದಿಗೆ ಸುಮಾರು 100 ಜನರ ಗೃಹಲಕ್ಷ್ಮೀ ಗ್ಯಾರಂಟಿ ಯೋಜನೆಯ ನೋಂದಣಿಯನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ಮಾಜಿ ನಗರಸಭಾಧ್ಯಕ್ಷ ಬಿ ಬಿ ಅಸೂಟಿ ಉಪಸ್ಥಿತರಿದ್ದರು.

## ಮುಖ್ಯ ಬಜಾರ್ ರಸ್ತೆ ಕಾಮಗಾರಿಗಾಗಿ ತೆಗೆದ ಮಣ್ಣು ಇತರೆ ಕಾಮಗಾರಿಗೆ ಬಳಕೆ: ಗುತ್ತಿಗೆದಾರರದ್ದೇ ಆಟ

# ಗುಣಮಟ್ಟದ ಕಾಮಗಾರಿಗೆ ಆಗ್ರಹ





■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಮುಖ್ಯ ಬಜಾರ್‌ನ ಕಾಂಕ್ರೀಟ್ ರಸ್ತೆ ಕಾಮಗಾರಿ ನಿಧಾನಗತಿಯಲ್ಲಿ ಸಾಗಿದ್ದಲ್ಲದೇ, ರಸ್ತೆಗೆ ಮೊರಂ ಬದಲಾಗಿ ಮಣ್ಣನ್ನು ಹಾಕಲಾಗುತ್ತಿದೆ ಎಂದು ಬುಧವಾರ ಕರವೇ ಕಾರ್ಯಕರ್ತರು ಮತ್ತು ಸಾರ್ವಜನಿಕರು ಕಾಮಗಾರಿ ತಡೆದು ಗುಣಮಟ್ಟದ ಕಾಮಗಾರಿಗೆ ಆಗ್ರಹಿಸಿದರು.

ಬೇಸಿಗೆಯಲ್ಲಿ ಧೂಳು, ಮಳೆಗಾಲದಲ್ಲಿ ಕೆಸರಿನ ಸಮಸ್ಯೆ ತಪ್ಪಿಸುವ ನಿಟ್ಟಿನಲ್ಲಿ ಜೂನ್ 2ರಂದು ಪುರಸಭೆಯ 15ನೇ ಹಣಕಾಸು ಮತ್ತು ಎಸ್‌ಎಫ್‌ಸಿ ಸೇರಿ ಅಂದಾಜು 1 ಕೋಟಿ ರೂ ಅನುದಾನದ ಕಾಮಗಾರಿಗೆ ಶಾಸಕ ಡಾ. ಚಂದ್ರು ಲಮಾಣಿ ಭೂಮಿಪೂಜೆ ನೆರವೇರಿಸಿ ಗುಣಮಟ್ಟದ ಕಾಮಗಾರಿಗೆ ಸೂಚಿಸಿದ್ದರು. ಆದರೆ ಭೂಮಿಪೂಜೆಯಾಗಿ ತಿಂಗಳ ಬಳಿಕ ಒತ್ತಾಯದ ಹಿನ್ನೆಲೆಯಲ್ಲಿ, ಮೊಣಕಾಲುದ್ದ ರಸ್ತೆ ಅಗೆದು ಮಳೆ ಪ್ರಾರಂಭವಾಗಿದ್ದರಿಂದ ಕಾಮಗಾರಿ ಸ್ಥಗಿತಗೊಳಿಸಲಾಗಿದ್ದು, ಮತ್ತೆ 1 ತಿಂಗಳ ಕಾಲ ಜನತೆ, ವ್ಯಾಪಾರಸ್ಥರು ಪಡಬಾರದ ಯಾತನೆ ಅನುಭವಿಸುವಂತಾಯಿತು.

ಬುಧವಾರ ಗುತ್ತಿಗೆದಾರರು ರಸ್ತೆಗೆ ಕೆಂಪು ಮೋರಂ ಹಾಕುವ ಬದಲಾಗಿ, ಹುಲ್ಲಿನಿಂದ ಕೂಡಿದ ಕಟಗು ರೂಪದ ಮಣ್ಣು ಹಾಕುವ ಮೂಲಕ ಕಾಮಗಾರಿ ಪ್ರಾರಂಭಿಸಿದ್ದಾರೆ. ಇದನ್ನು ಗಮನಿಸಿದ ಕರವೇ ಕಾರ್ಯಕರ್ತರು ಮತ್ತು ನಾಗರಿಕರು ಕಾಮಗಾರಿಗೆ ಗುಣಮಟ್ಟದ ಮೋರಂ ಹಾಕಬೇಕು. ಕೋಟಿ ರೂ ವೆಚ್ಚದ ಕಾಮಗಾರಿ ಕ್ರಿಯಾಯೋಜನೆಯಂತೆ ನಡೆಯಬೇಕು.

ಇದು ಪುರಸಭೆಯ ಅನುದಾನವಾಗಿದ್ದು, ಸ್ಥಳೀಯ ಪುರಸಭೆಯ ಸರ್ವ ಸದಸ್ಯರು, ಅಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ನಿಗಾವಹಿಸಬೇಕು ಎಂದು ಕರವೇ ತಾಲೂಕಾ ಪ್ರಧಾನ ಕಾರ್ಯದರ್ಶಿ ಪ್ರಕಾಶ ಕೊಂಚಿಗೇರಿಮಠ ಅಸಮಾಧಾನ ವ್ಯಕ್ತಪಡಿಸಿದರು.

ನಾಗರಾಜ ಚಿಂಚಲಿ, ಶಾಸಕ ಡಾ.ಚಂದ್ರು ಲಮಾಣಿ ಅವರು ತಾಲೂಕಿನಲ್ಲಿ ಭೂಮಿಪೂಜೆ ನೆರವೇರಿಸಿದ ಮೊದಲ ಕಾಮಗಾರಿ ಇದಾಗಿದೆ. ಮುಖ್ಯ ಬಜಾರ್ ರಸ್ತೆಯಷ್ಟೇ ಅಲ್ಲದೇ ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ನಗರೋತ್ಥಾನ ಯೋಜನೆಯಡಿ 8.5 ಕೋಟಿ ರೂ ಅನುದಾನದಲ್ಲಿ ನಡೆಯುತ್ತಿರುವ ಕಾಮಗಾರಿಗಳು ರಾಜಕೀಯ ಪ್ರಭಾವದಿಂದ ಕಳಪೆಯಾಗುತ್ತಿವೆ. ಮುಖ್ಯ ಬಜಾರ್ ರಸ್ತೆ ಕಾಮಗಾರಿಗಾಗಿ ತೆಗೆದ ಮಣ್ಣನ್ನು ಇತರೆ ಕಾಮಗಾರಿಗೆ ಬಳಸಲಾಗುತ್ತಿದೆ.

ಸರ್ಕಾರದ ಹಣ ಪೋಲಾದರೂ ಯಾರ ಮೇಲೂ ಕ್ರಮವಾಗಿಲ್ಲ. ಇದಕ್ಕೆ ಪಟ್ಟಣದಲ್ಲಿ ನಡೆದ ಅನೇಕ ಕಾಮಗಾರಿಗಳು ನಿದರ್ಶನವಾಗಿವೆ. ಆದ್ದರಿಂದ ನಡೆಯುತ್ತಿರುವ ಕಾಮಗಾರಿಗಳ ಮೇಲೆ ಜಿಲ್ಲಾಧಿಕಾರಿಗಳು, ನಗರ ಯೋಜನಾ ನಿರ್ದೇಶಕರು ನಿಗಾವಹಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ವೇಳೆ ಗಣೇಶ ಮೆಹರವಾಡೆ, ಶಿವಾನಂದ ಮೆಕ್ಕಿ, ದೇವಣ್ಣ ರೋಣದ, ಈಶ್ವರ ರೋಣದ, ಮಹೇಶ ಬಿ ಸೇರಿ ಅನೇಕರು ಹಾಜರಿದ್ದು, ರಸ್ತೆಗೆ ಹಾಕುತ್ತಿದ್ದ ಮಣ್ಣನ್ನು ವಾಪಸ್ ಕಳುಹಿಸಿದರು.

ಈ ಕುರಿತು ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ ಅವರನ್ನು ಸಂಪರ್ಕಿಸಲಾಗಿ, ಗುತ್ತಿಗೆದಾರರಿಗೆ ಗುಣಮಟ್ಟದ ಕಾಮಗಾರಿ ಮಾಡುವಂತೆ ತಾಕೀತು ಮಾಡಲಾಗಿದೆ.

ಕಾಮಗಾರಿ ಗುಣಮಟ್ಟದ ಪರೀಕ್ಷೆ ಮತ್ತು ನಿಗಾವಹಿಸುವ ಬಗ್ಗೆ ಇಂಜಿನಿಯರ್‌ಗಳಿಗೆ ತಿಳಿಸಿದ್ದೇನೆ ಎಂದರು.

> ಕಾಮಗಾರಿಯ ಮೇಲೆ ಯಾರ ಮೇಲುಸ್ತುವಾರಿಯೂ ಇಲ್ಲದ್ದರಿಂದ ಗುತ್ತಿಗೆದಾರರು ಆಡಿದ್ದೇ ಆಟವಾಗಿದೆ. ಕಾಮಗಾರಿಯನ್ನು ಕಣ್ತುಂಬಿಕೊಳ್ಳುತ್ತಿರುವ ವ್ಯಾಪಾರಸ್ಥರು, ಸ್ಥಳೀಯ ಜನಪ್ರತಿನಿಧಿಗಳು ನಮಗ್ಯಾಕೆ ಉಸಾಬರಿ ಎಂದು ನುಣುಚಿಕೊಳ್ಳುತ್ತಿರುವುದರಿಂದ ಕೋಟ್ಯಾಂತರ ರೂ ಕಾಮಗಾರಿ ಸಂಪೂರ್ಣ ಕಳಪೆಯಾಗಿ ಮೂರ್ನಾಲ್ಕು ತಿಂಗಳಲ್ಲಿ ರಸ್ತೆ ಹದಗೆಟ್ಟು ಮತ್ತದೇ ಗೋಳು ಅನುಭವಿಸುವಂತಾಗುತ್ತದೆ.
>
> – ಪ್ರಕಾಶ ಕೊಂಚಿಗೇರಿಮಠ.
> ಕರವೇ ತಾಲೂಕಾ ಪ್ರಧಾನ ಕಾರ್ಯದರ್ಶಿ.

# ದೈಹಿಕ, ಮಾನಸಿಕ ದೃಢತೆಗೆ ಕ್ರೀಡೆ ಸಹಕಾರಿ

▸▸ ಮೊದಲನೇ ಪುಟದಿಂದ

ಸಮನಾಗಿ ಸ್ವೀಕರಿಸುವ ಗುಣ ಬೆಳೆಯುತ್ತದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯೋಪಾಧ್ಯಾಯ ಎಸ್ ಹೆಚ್ ಪೂಜಾರ, ಕ್ರೀಡಾಜ್ಯೋತಿ ಬೆಳಗಿಸಿದ ಸರಕಾರಿ ನೌಕರರ ಸಂಘದ ಅಧ್ಯಕ್ಷ ಡಿ ಎಚ್ ಪಾಟೀಲ ಮಾತನಾಡಿ, ಕ್ರೀಡೆಯನ್ನು ಎಲ್ಲ ಮಕ್ಕಳು ಕ್ರೀಡಾ ಮನೋಭಾವದಿಂದ ಸ್ವೀಕರಿಸಿ, ಸೋಲನ್ನು ಸವಾಲಾಗಿ ಸ್ವೀಕರಿಸಿ ಮುಂದಿನ ದಿನಗಳಲ್ಲಿ ಗೆಲುವಿನ ಮೆಟ್ಟಲಾಗಿ ಮಾಡಿಕೊಂಡು ಮುಂದೆ ಸಾಗುವ ದೃಢ ಸಂಕಲ್ಪ ಮಾಡಿ ಎಂದು ಕರೆ ನೀಡಿದರು.

ಕ್ರೀಡಾಕೂಟದ ಉದ್ಘಾಟನೆಯನ್ನು ಎಸ್‌ಡಿಎಂಸಿ ಅಧ್ಯಕ್ಷೆ ನಿರ್ಮಲಾ ನರೇಗಲ್ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಬಿಆರ್‌ಪಿ ಈಶ್ವರ ಮೆಡ್ಲೇರಿ, ಸಿಆರ್‌ಸಿಯ ಸಂಪನ್ಮೂಲ ವ್ಯಕ್ತಿಗಳಾದ ಸತೀಶ್ ಭೋಮಲೆ, ಉಮೇಶ ನೇಕಾರ್, ಡಿ ಡಿ ಲಮಾಣಿ, ಬಿ ಕೆ ದ್ಯಾವನಗೌಡ್ರ, ಎಸ್ ಎಸ್ ಜೀರನಕಳ್ಳಿ ಸೇರಿದಂತೆ ಶಾಲೆಯ ಪ್ರಧಾನ ಗುರುಗಳು, ದೈಹಿಕ ಶಿಕ್ಷಣ ಶಿಕ್ಷಕರು ಉಪಸ್ಥಿತರಿದ್ದರು. ಎನ್ ಎಸ್ ಬಂಕಾಪುರ ವಂದಿಸಿದರು.

## ಕ ರಾ ಹ ಸಂ ನಿರ್ದೇಶಕ ಎಸ್ ಬಿ ಬಾರಕೇರರ ನಿವೃತ್ತಿ ಪ್ರಯುಕ್ತ ಸನ್ಮಾನ

# ಪ್ರಾಮಾಣಿಕ ಆಡಳಿತದ ನಡೆಸಿದ ಹೆಗ್ಗಳಿಕೆ ಬಾರಕೇರರದ್ದು



■ ವಿಜಯಸಾಕ್ಷಿ ಸುದ್ದಿ, ಗದಗ

ಮಾನವ ಸಾರ್ಥಕ ಜೀವನಕ್ಕೆ ಮಾದರಿಯಾಗಬೇಕಾದರೆ ಸಮಾಜಮುಖಿಯಾಗಿ ಬೆಳೆದು, ಸಮಾಜದ, ಜನರ ಕಷ್ಟಗಳಿಗೆ ಮತ್ತು ಸಮಸ್ಯೆಗಳಿಗೆ ಸ್ಪಂದಿಸುವ ಗುಣವನ್ನು ರೂಢಿಸಿಕೊಂಡಾಗಲೇ ಸಾರ್ಥಕ ಬದುಕಿನ ರಾಯಭಾರಿಯಾಗುತ್ತಾರೆ ಎನ್ನುವುದಕ್ಕೆ ಸಿದ್ರಾಮೇಶ್ವರ ಬಾರಕೇರರು ಸಾಕ್ಷಿಯಾಗಿದ್ದಾರೆ ಎಂದು ಕರಾರ ಸಂಸ್ಥೆಯ ನಿವೃತ್ತ ವಿಭಾಗೀಯ ನಿಯಂತ್ರಣಾಧಿಕಾರಿ ಎಫ್ ಸಿ ಹಿರೇಮಠ ಅಭಿಪ್ರಾಯಪಟ್ಟರು.

ಅವರು ಇತ್ತೀಚೆಗೆ ಕ. ರಾ. ಹ. ಸಂ. ನಿರ್ದೇಶಕ ಸಿದ್ದರಾಮೇಶ್ವರ ಬಾರಕೇರರು ನಿವೃತ್ತಿ ಹೊಂದಿದ ಪ್ರಯುಕ್ತ ಅವರನ್ನು ಸನ್ಮಾನಿಸಿ ಮಾತನಾಡಿ, ಸಮಾರು 35 ವರ್ಷಗಳ ಕಾಲ ಅಧಿಕಾರಿಗಳೊಂದಿಗೆ, ಸಂಸ್ಥೆಯ ಸಿಬ್ಬಂದಿಗಳೊಂದಿಗೆ, ಗ್ರಾಹಕರೊಂದಿಗೆ ಉತ್ತಮವಾಗಿ ಸ್ಪಂದಿಸುತ್ತ, ಪ್ರಾಮಾಣಿಕತೆಯಿಂದ ಆಡಳಿತ ನಡೆಸಿದ ಹೆಗ್ಗಳಿಕೆ ಬಾರಕೇರರಿಗೆ ಸಲ್ಲುತ್ತದೆ. ಜನಸ್ನೇಹಿ ಆಡಳಿತ ನೀಡಿದ ಅವರ ನಿವೃತ್ತ ಜೀವನ ಸಮೃದ್ಧಿಯಿಂದ ಕೂಡಿರಲೆಂದು ಹಾರೈಸೋಣ ಎಂದರು.

ಗಣ್ಯ ವ್ಯಾಪಾರಸ್ಥರಾದ ವ್ಹಿ ಜೆ ಬಾಳಿಹಳ್ಳಿಮಠ ಮಾತನಾಡಿ, ಬಾರಕೇರರು ತಮ್ಮ ಅಧಿಕಾರಾವಧಿಯಲ್ಲಿ ಅಹಂಕಾರವನ್ನು ತೋರಿಸದೆ, ಸರ್ಕಾರದ ಕೆಲಸ ದೇವರ ಕೆಲಸವೆಂದು ತಿಳಿದು ಪ್ರಾಮಾಣಿಕತೆಯಿಂದ ಸೇವೆಗೈದವರು. ಅಧಿಕಾರದಲ್ಲಿದ್ದವರು ಹೇಗೆ ನಡೆದುಕೊಳ್ಳಬೇಕೆಂಬುದನ್ನು ಬಾರಕೇರರನ್ನು ನೋಡಿ ಕಲಿಯುವಂತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಸನ್ಮಾರ್ಗ ಕಾಲೇಜಿನ ಆಡಳಿತಾಧಿಕಾರಿ ಎಂ ಸಿ ಹಿರೇಮಠ ಮಾತನಾಡಿ, ಬಾರಕೇರರ ನಿಷ್ಕಾಮ ಸೇವೆ, ನಿರಂತರ ಒಡನಾಟ, ಹಿತ-ಮಿತ ಮಾತು, ಸರ್ವರನ್ನು ಪ್ರೀತಿಯಿಂದ ಕಾಣುವ ಮನೋಭಾವ, ಆಡಳಿತದಲ್ಲಿ ದಕ್ಷತೆ, ಸಮಾಜಮುಖಿ ಕಾಯಕ, ಸರ್ವ ಸಂಪನ್ನತೆಯ ಗುಣಗಳು ಅನುಕರಣೀಯ. ತಮ್ಮ ಸೇವೆಯುದ್ದಕ್ಕೂ ಯಾವುದೇ ಕಪ್ಪು ಚುಕ್ಕೆಯಿಲ್ಲದೆ ಸ್ವಾರ್ಥರಹಿತ ಸೇವೆಯನ್ನು ನಿರ್ವಹಿಸಿ, ಇಂದು ನಿವೃತ್ತರಾಗಿದ್ದಾರೆ. ಅವರ ಈ ಎಲ್ಲಾ ಸಾಧನೆಗಳಿಗೆ ಅವರ ಕುಟುಂಬದ ಸಹಕಾರವೂ ಮುಖ್ಯವಾದದ್ದು ಎಂದರು.

# ಕಲುಷಿತ ನೀರು ಕುಡಿದು ಅವಘಡ: ತನಿಖೆಗೆ ಆದೇಶ



■ ವಿಜಯಸಾಕ್ಷಿ ಸುದ್ದಿ, ಚಿತ್ರದುರ್ಗ

ನಗರದ ಕವಾಡಿಗರಹಟ್ಟಿಯಲ್ಲಿ ಕಲುಷಿತ ನೀರು ಕುಡಿದು ಮಹಿಳೆ ಸೇರಿ ಇಬ್ಬರು ಮೃತಪಟ್ಟಿದ್ದು, 70ಕ್ಕೂ ಹೆಚ್ಚು ಜನರು ಅಸ್ವಸ್ಥರಾಗಿರುವ ಘಟನೆ ಕುರಿತಂತೆ ರಾಜ್ಯ ಸರ್ಕಾರ ತನಿಖೆಗೆ ಆದೇಶಿಸಿದೆ. ಘಟನೆ ಕುರಿತಂತೆ ಜಿಲ್ಲಾಡಳಿತದಿಂದ ಮಾಹಿತಿ ಪಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ, ತನಿಖೆಗೆ ಆದೇಶಿಸಿದ್ದು, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರ ನೇತೃತ್ವದಲ್ಲಿ ತನಿಖಾ ತಂಡ ರಚಿಸಲಾಗಿದೆ.

ಈ ತಂಡ ಸ್ಥಳ ಪರಿಶೀಲನೆ ಮಾಡಿ, ಮೂರು ದಿನಗಳ ಒಳಗಾಗಿ ವರದಿ ನೀಡುವಂತೆ ಸೂಚಿಸಲಾಗಿದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಆರೋಗ್ಯ ಇಲಾಖೆಯ ವೈದ್ಯಾಧಿಕಾರಿ ಸೇರಿ ಅನೇಕರು ತನಿಖಾ ತಂಡದಲ್ಲಿದ್ದಾರೆ. ಘಟನೆಯ ಕುರಿತು ವಿಶ್ಲೇಷಣೆ ಮಾಡಿ ತುರ್ತು ತನಿಖಾ ವರದಿಯನ್ನು ನೀಡಲಿದ್ದಾರೆ. ಇದರ ಆಧಾರದ ಮೇರೆಗೆ ತಪ್ಪಿತಸ್ಥರನ್ನು ಪತ್ತೆ ಮಾಡಿ ಕ್ರಮಕೈಗೊಳ್ಳಲು ಆದೇಶಿಸಲಾಗಿದೆ.

ಕವಾಡಿಗರಹಟ್ಟಿಯಲ್ಲಿ ಕಲುಷಿತ ನೀರು ಸೇವಿಸಿ ಮೃತರಾದವರ ಕುಟುಂಬಕ್ಕೆ ಸರ್ಕಾರದಿಂದ ಸೂಕ್ತ ಪರಿಹಾರ ನೀಡಲಾಗುವುದು, ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾದವರಿಗೆ ಸೂಕ್ತ ಚಿಕಿತ್ಸೆ ನೀಡಲಾಗುವುದು ಎಂದು ಯೋಜನೆ ಮತ್ತು ಸಾಂಖ್ಯಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ ಹೇಳಿದ್ದಾರೆ.

# ಮತದಾರರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ-2024

▸▸ ಮೊದಲನೇ ಪುಟದಿಂದ

ಮತದಾರರ ವಿವರ, ಮತದಾರರ ಪಟ್ಟಿಗಳಲ್ಲಿನ ನ್ಯೂನತೆಗಳನ್ನು ಸರಿಪಡಿಸುವುದು(ಉತ್ತಮ ಗುಣಮಟ್ಟವಲ್ಲದ ಮತದಾರರ ಭಾವಚಿತ್ರ ಸಂಗ್ರಹಣೆ, ವಿಳಾಸವನ್ನು ಸರಿಯಾಗಿ ಕಾಲೋಚಿತಗೊಳಿಸುವುದು, ವಯಸ್ಸಿನ ನ್ಯೂನತೆಗಳನ್ನು ಸರಿಪಡಿಸುವುದು ಹಾಗೂ ಇತರ ನ್ಯೂನ್ಯತೆಗಳನ್ನು ಸರಿಪಡಿಸುವುದು), ದಿವ್ಯಾಂಗಚೇತನರ ಮಾಹಿತಿಯನ್ನು ಕಾಲೋಚಿತಗೊಳಿಸುವುದು (ನಮೂನೆ 8ರ ಮುಖಾಂತರ), ನ್ಯೂನತೆಗಳನ್ನು ಸರಿಪಡಿಸುವುದು, ಒಂದೇ ರೀತಿಯ ನಮೂದುಗಳ ಪರಿಶೀಲನೆ, ರಿಪೀಟ್ ಎಪಿಕ್‌ಗಳ ಪರಿಶೀಲನೆ, ಇನ್ನಿತರೆ ಮತದಾರ ಪಟ್ಟಿಗಳ ಮಾಹಿತಿಯ ಸಂಗ್ರಹಣೆ ಮಾಹಿತಿಗಳನ್ನು ಬಿಎಲ್‌ಓಗಳು ಸಾರ್ವಜನಿಕರ ಮನೆಗಳಿಗೆ ಭೇಟಿ ನೀಡಿದಾಗ ಸಂಪೂರ್ಣ ಸಹಕಾರ ನೀಡುವಂತೆ ಗದಗ ಜಿಲ್ಲಾಧಿಕಾರಿ ವೈಶಾಲಿ ಎಂ ಎಲ್ ತಿಳಿಸಿದ್ದಾರೆ.

# ಪರಸ್ಪರ ಸಹಾಯ ಮಾಡುವುದೇ ಮನುಷ್ಯತ್ವ

▸▸ ಮೊದಲನೇ ಪುಟದಿಂದ

ಆಹಾರವನ್ನು ಸಂಗ್ರಹಿಸುವ ಮೂಲಕ ತಮ್ಮ ಸೇವೆಯನ್ನು ವಿಸ್ತರಿಸಬಯಸಿದ್ದಾರೆ.

ಈ ಉದ್ದೇಶಕ್ಕಾಗಿಯೇ ಅವರು ವಾಹನವನ್ನು ಸಹ ಖರೀದಿಸಿದ್ದಾರೆ.

'ನಾನು ಮೂಲತಃ ಶ್ರೀಮಂತ ಕುಟುಂಬದಿಂದ ಬಂದಿದ್ದೇನೆ. ಆದರೆ, ಬಾಲ್ಯದಿಂದಲೂ ಬಡವರಿಗಾಗಿ ಏನಾದರೂ ಮಾಡಬೇಕೆಂಬ ಆಸೆ ಇತ್ತು. ಸುಮಾರು 15 ವರ್ಷಗಳ ಹಿಂದೆ ನನ್ನ ತಂದೆ ನೀಲಪ್ಪ ಗುಡ್ಡಪ್ಪ ಶಿರಹಟ್ಟಿ ಸೇವಾ ಸಂಸ್ಥೆಯ ಬ್ಯಾನರ್ ಅಡಿಯಲ್ಲಿ ನಾವು ಈ ಸೇವೆಯನ್ನು ಪ್ರಾರಂಭಿಸಿದ್ದೇವೆ' ಎನ್ನುತ್ತಾರೆ ಕರಿಯಪ್ಪ.

ನನ್ನ ಹೆಂಡತಿ ನಿತ್ಯವೂ ಸಾಧ್ಯವಾದಷ್ಟು ಅಡುಗೆ ಸಿದ್ಧಪಡಿಸಿ ಕೊಡುತ್ತಾರೆ ಎನ್ನುವ ಕರಿಯಪ್ಪ, ಎಂದಿಗೂ ಇತರರಿಂದ ದೇಣಿಗೆಗಳನ್ನು ನಿರೀಕ್ಷಿಸದೇ, ಸ್ವತಂತ್ರವಾಗಿಯೇ ಈ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರಿಂದ ನೆರವು ಪಡೆಯುತ್ತಿರುವ ಫಲಾನುಭವಿ ಇಬ್ರಾಹಿಂ, 'ನಮ್ಮಂಥವರ ಕಲ್ಯಾಣದಲ್ಲಿ ಯಾರಿಗೂ ಯಾವುದೇ ಆಸಕ್ತಿ ಇಲ್ಲ. ಕೆಲವರು ತಮ್ಮ ಬಳಿಯಿರುವ ಸಂಪತ್ತನ್ನು ತೋರಿಸಲು ಅಥವಾ ಭಿಕ್ಷುಕರನ್ನು ಆ ಕ್ಷಣದಲ್ಲಿ ಅಲ್ಲಿಂದ ಸಾಗಹಾಕಲು ನಮಗೆ ಹಣವನ್ನು ನೀಡುತ್ತಾರೆ. ಆದರೆ ಕರಿಯಪ್ಪನ ಭಾವನೆಯೇ ಬೇರೆ. ಅವರು ನಮ್ಮನ್ನು ತಮ್ಮ ಕುಟುಂಬದ ಸದಸ್ಯರಂತೆಯೇ ನೋಡಿಕೊಳ್ಳುತ್ತಾರೆ' ಎನ್ನುತ್ತಾರೆ.

# ಅಸ್ಸಾಂನಲ್ಲಿ ಅಕ್ರಮ ಶಸ್ತ್ರಾಸ್ತ್ರ ತರಬೇತಿ ಶಿಬಿರ: ಇಬ್ಬರ ಬಂಧನ



■ ವಿಜಯಸಾಕ್ಷಿ ಸುದ್ದಿ, ದರ್ರಾಂಗ್

ಅಸ್ಸಾಂನಲ್ಲಿ ಬಲಪಂಥೀಯ ಸಂಘಟನೆಯೊಂದು ಆಯೋಜಿಸಿದೆ ಎನ್ನಲಾದ ಶಸ್ತ್ರಾಸ್ತ್ರ ತರಬೇತಿ ಶಿಬಿರದ ವೀಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆದ ನಂತರ ಇಬ್ಬರನ್ನು ಬಂಧಿಸಲಾಗಿದೆ.

ಪ್ರವೀಣ್ ತೊಗಾಡಿಯಾ ಅವರ ಅಂತಾರಾಷ್ಟ್ರೀಯ ಹಿಂದೂ ಪರಿಷತ್‌ನೊಂದಿಗೆ ಗುರುತಿಸಿಕೊಂಡಿರುವ ರಾಷ್ಟ್ರೀಯ ಬಜರಂಗದಳ ಪೊಲೀಸರು ಅಥವಾ ಜಿಲ್ಲಾಡಳಿತದ ಅನುಮತಿಯಿಲ್ಲದೆ ಖಾಸಗಿ ಶಾಲೆಯ ಆವರಣದಲ್ಲಿ ತರಬೇತಿ ಶಿಬಿರವನ್ನು ಆಯೋಜಿಸಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಉತ್ತರ ಅಸ್ಸಾಂನ ದರ್ರಾಂಗ್ ಜಿಲ್ಲೆಯ ಮಂಗಲ್‌ದಾಯ್‌ನಲ್ಲಿರುವ ಖಾಸಗಿ ಶಾಲೆಯ ಆವರಣದಲ್ಲಿ ಜುಲೈ 27ರಿಂದ 29ರವರೆಗೆ ನಡೆದ ಶಿಬಿರದಲ್ಲಿ 100ಕ್ಕೂ ಹೆಚ್ಚು ಸ್ಥಳೀಯ ಯುವಕರು ಭಾಗವಹಿಸಿದ್ದರು. ಐಪಿಸಿ ಸೆಕ್ಷನ್ 34 ಮತ್ತು 153 ಎ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾ ಪೊಲೀಸರು ಟ್ವೀಟ್ ಮಾಡಿದ್ದಾರೆ. ಪೊಲೀಸರು ಹೇಮಂತ ಪಯೆಂಗ್ ಮತ್ತು ರತನ್ ದಾಸ್ ಅವರನ್ನು ಬಂಧಿಸಿದ್ದಾರೆ. ಪಯೆಂಗ್ ಪ್ರಾಂಶುಪಾಲರಾಗಿದ್ದು, ದಾಸ್ ಶಾಲೆಯ ಉದ್ಯೋಗಿಯಾಗಿದ್ದಾರೆ ಎಂದು ಎಸ್ಪಿ ಪ್ರಕಾಶ್ ಸೋನೊವಾಲ್ ತಿಳಿಸಿದ್ದಾರೆ. ಇನ್ನೋರ್ವ ವ್ಯಕ್ತಿ ಅಭಿಜಿತ್ ಘೋಷ್ ಪರಾರಿಯಾಗಿದ್ದಾನೆ. ಯೋಗ ಶಿಬಿರವನ್ನು ಆಯೋಜಿಸಲು ಘೋಷ್ ಶಾಲಾ ಅಧಿಕಾರಿಗಳಿಂದ ಅನುಮತಿ ಪಡೆದಿದ್ದರು. ಆದರೆ ಅವರಿಗೆ ತಿಳಿಯದಂತೆ ಶಸ್ತ್ರಾಸ್ತ್ರ ತರಬೇತಿ ನಡೆಸಿದರು. ಘೋಷ್ ಬಲಪಂಥೀಯ ಗುಂಪಿನ ಸದಸ್ಯರೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

## ಸುದ್ದಿಗೋಷ್ಠಿಯಲ್ಲಿ ಇನ್ನರ್‌ವ್ಹೀಲ್ ಕ್ಲಬ್ ಅಧ್ಯಕ್ಷೆ ರಜನಿ ಪಾಟೀಲ ಮಾಹಿತಿ

# 'ಅವರ್ ಸ್ಟೇಟ್-ಅವರ್ ಟೇಸ್ಟ್' ಸ್ಪರ್ಧೆ ಆ.5ಕ್ಕೆ



■ ವಿಜಯಸಾಕ್ಷಿ ಸುದ್ದಿ, ಗದಗ

'ಅವರ್ ಸ್ಟೇಟ್-ಅವರ್ ಟೇಸ್ಟ್' ಎಂಬ ಹೆಸರಿನಲ್ಲಿ ತಿಂಡಿ-ತಿನಿಸು ಸ್ಪರ್ಧೆಯನ್ನು ನಗರದ ಉಷಾದೇವಿ ಜಿ ಕುಷ್ಟಗಿ ಕಮ್ಯೂನಿಟಿಕೇರ್ ಸೆಂಟರ್ ಸಭಾಂಗಣದಲ್ಲಿ ಆ.5ರ ಬೆಳಿಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಗದಗ-ಬೆಟಗೇರಿ ಇನ್ನರ್‌ವ್ಹೀಲ್ ಕ್ಲಬ್ ಅಧ್ಯಕ್ಷೆ ರಜನಿ ಪಾಟೀಲ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯುನ್ನುದ್ದೇಶಿಸಿ ಮಾತನಾಡಿ, ಗೋಲ್ಡ್ ವಿನ್ನರ್ ಅಡುಗೆ ಎಣ್ಣೆ ಬಳಸಿಕೊಂಡು, ಯಾವುದಾದರೂ ಒಂದು ತಿನಿಸನ್ನು ಮನೆಯಲ್ಲಿ ತಯಾರಿಸಿಕೊಂಡು ಬರಬೇಕು. ಸ್ಪರ್ಧೆಯ ಸ್ಥಳಕ್ಕೆ ನೀವು ಬಳಸಿದ ಎಣ್ಣೆಯ ರ್‍ಯಾಪರ್/ಕಂಟೈನರ್ ಜೊತೆಗೆ ತೆಗೆದು-ಕೊಂಡು ಬರಬೇಕು. ಸ್ಪರ್ಧೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೆ ಎರಡು ಅಡಿ ಜಾಗೆ ನೀಡಲಾಗುತ್ತದೆ. ಅಲ್ಲಿ ನಿರ್ಣಾಯಕರು ಪ್ರದರ್ಶನಕ್ಕಿಟ್ಟಿದ್ದ ಅಡುಗೆ ಅಥವಾ ತಿನಿಸನ್ನು ರುಚಿ ನೋಡಿ, ಅದಕ್ಕೆ ಅಂಕ ನೀಡುತ್ತಾರೆ ಎಂದರು.

ಜಿಲ್ಲಾ ಮಟ್ಟದಲ್ಲಿ ಕ್ರಮವಾಗಿ 7 ಸಾವಿರ ರೂ, 4 ಸಾವಿರ ರೂ. ಹಾಗೂ 3 ಸಾವಿರ ರೂ. ನಗದನ್ನು ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದವರಿಗೆ ನೀಡಲಾಗುತ್ತಿದೆ. ಇಲ್ಲಿ ವಿಜೇತರಾದವರು ಬೆಂಗಳೂರಿನಲ್ಲಿ ನಡೆಯುವ ಸ್ಪರ್ಧೆಯಲ್ಲಿ ಭಾಗವಹಿಸಬೇಕು. ಅಲ್ಲಿ ವಿಜೇತರಾದವರಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನವಾಗಿ ಕ್ರಮವಾಗಿ ಒಂದು ಲಕ್ಷ ರೂ., 60 ಸಾವಿರ ರೂ ಹಾಗೂ 40 ಸಾವಿರ ರೂ. ನಗದು ಸಿಗಲಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ರೋಟರಿ ಗದಗ ಸೆಂಟ್ರಲ್ ಅಧ್ಯಕ್ಷ ವಿಜಯಕುಮಾರ ಹಿರೇಮಠ, ಗದಗ-ಬೆಟಗೇರಿ ರೋಟರಿ ಕ್ಲಬ್ ಅಧ್ಯಕ್ಷ ಚಂದ್ರಮೌಳಿ ಜಾಲಿ, ಕಾರ್ಯದರ್ಶಿ ಸುನೀಲ ಕಬಾಡಿ, ಗದಗ-ಬೆಟಗೇರಿ ಇನ್ನರ್‌ವ್ಹೀಲ್ ಕ್ಲಬ್ ಕಾರ್ಯದರ್ಶಿ ಹೇಮಾ ಪುಂಗಲಿಯಾ, ಜ್ಯೋತಿ ಭರಮಗೌಡ್ರ, ಪ್ರಿಯಾಂಕಾ ಹಳ್ಳಿ, ವಿಜಯಲಕ್ಷ್ಮಿ ಮಾನ್ವಿ ಇದ್ದರು.

## ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರಿಗೆ ಕಾನೂನು ಅರಿವು-ನೆರವು ಕಾರ್ಯಕ್ರಮ

# ಮಾನವ ಕಳ್ಳ ಸಾಗಾಣಿಕೆ ತಡೆ ಕಾಯ್ದೆ ಕುರಿತು ಜಾಗೃತಿ



■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಮಾನವ ಕಳ್ಳ ಸಾಗಾಣಿಕೆಯು ಕಾನೂನು ರೀತಿಯ ಅಕ್ಷಮ್ಯವಾಗಿದ್ದು, ಈ ರೀತಿಯ ಪ್ರಕರಣಗಳು ಇತ್ತೀಚೆಗೆ ಹೆಚ್ಚಳವಾಗುತ್ತಿವೆ. ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಕಾರ್ಯಕ್ಷೇತ್ರದಲ್ಲಿ ಹೆಚ್ಚು ಗಮನ ಹರಿಸುವುದರ ಮೂಲಕ ಜನಸಾಮಾನ್ಯರಲ್ಲಿ ಅರಿವು ಮೂಡಿಸಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಪರಶುರಾಮ ಎಫ್ ದೊಡ್ಡಮನಿ ಹೇಳಿದರು.

ಇಲ್ಲಿನ ಸಂತೋಷನಗರದ ಸಮುದಾಯ ಭವನದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಧಾರವಾಡ ಇವುಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಮಾನವ ಕಳ್ಳ ಸಾಗಾಣಿಕೆ ತಡೆ ಕಾಯ್ದೆ, ಮಕ್ಕಳ ಹಕ್ಕುಗಳು ಹಾಗೂ ಸಂತ್ರಸ್ಥರ ಪರಿಹಾರ ಕಾಯ್ದೆ ಕುರಿತು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರಿಗೆ ಹಮ್ಮಿಕೊಂಡಿದ್ದ ಕಾನೂನು ಅರಿವು-ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಾನವ ಕಳ್ಳ ಸಾಗಾಣಿಕೆ ತಡೆ ಕಾಯ್ದೆ, ಮಕ್ಕಳ ಹಕ್ಕುಗಳು ಹಾಗೂ ಸಂತ್ರಸ್ಥರ ಪರಿಹಾರ ಕಾಯ್ದೆ ಕುರಿತು ಜಾಥಾ ಮತ್ತು ಮಾನವ ಸರಪಳಿಯನ್ನು ರಚಿಸಿ ಘೋಷಣೆಗಳನ್ನು ಕೂಗುವುದರ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಡಿ, ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳಾದ ಕಾಂಚನಾ ಅಮಟೆ, ಯೋಜನೆಯ ಎಲ್ಲ ಮಹಿಳಾ ಮೇಲ್ವಿಚಾರಕಿಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸ್ವಸಹಾಯ ಸಂಘದ ಸದಸ್ಯರು ಹಾಜರಿದ್ದರು. ಹಿರಿಯ ಮಹಿಳಾ ಮೇಲ್ವಿಚಾರಕಿ ದೀಪಾ ಹೆಬ್ಬಳ್ಳಿ ಸ್ವಾಗತಿಸಿದರು. ಮಹಿಳಾ ಮೇಲ್ವಿಚಾರಕಿ ಸವಿತಾ ಬದ್ದಿ ನಿರೂಪಿಸಿದರು. ಮಹಿಳಾ ಮೇಲ್ವಿಚಾರಕಿ ಗಂಗಮ್ಮ ತುಮಗೇರಿ ವಂದಿಸಿದರು.

> ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಪದ್ಮಾವತಿ ಜಿ. ಮಾತನಾಡಿ, ಮಕ್ಕಳ ಭಿಕ್ಷಾಟನೆ ಮತ್ತು ಮಾನವ ಕಳ್ಳ ಸಾಗಾಣಿಕೆಯನ್ನು ಪ್ರಾರಂಭದ ಹಂತದಲ್ಲಿಯೇ ಗುರುತಿಸಿ ಸೂಕ್ತ ಕ್ರಮವನ್ನು ಕೈಗೊಂಡು ಪರಿಹಾರವನ್ನು ತೆಗೆದುಕೊಳ್ಳಬೇಕು ಎಂದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರೂಪಣಾಧಿಕಾರಿಗಳಾದ ಅನುಪಮಾ ಅಂಗಡಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಶರಣಬಸಪ್ಪ ಬೆಳಗುಂಪಿ, ಪ್ಯಾನಲ್ ವಕೀಲರಾದ ನೂರಜಹಾನ ಕಿಲ್ಲೇದಾರ, ಶ್ರೀನಿವಾಸ ಕುಲಕರ್ಣಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

# ನಕಲಿ ವಿಶ್ವವಿದ್ಯಾಲಯಗಳ ಬಗ್ಗೆ ಎಚ್ಚರಿಕೆವಹಿಸಿ: ಯುಜಿಸಿ

■ ವಿಜಯಸಾಕ್ಷಿ ಸುದ್ದಿ, ನವದೆಹಲಿ

ದೇಶದ 20 ವಿಶ್ವವಿದ್ಯಾಲಯಗಳನ್ನು ನಕಲಿ ಎಂದು ಯುಜಿಸಿ ಘೋಷಿಸಿದೆ. ಇಂತಹ ವಿದ್ಯಾಲಯಗಳು ಪದವಿ ನೀಡಲು ಯಾವುದೇ ಅಧಿಕಾರ ಹೊಂದಿಲ್ಲವೆಂದು ಯುಜಿಸಿ ಹೇಳಿದೆ. ಇಪ್ಪತ್ತು ವಿಶ್ವವಿದ್ಯಾಲಯಗಳ ಪೈಕಿ ಎಂಟು ವಿಶ್ವವಿದ್ಯಾಲಯಗಳು ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿವೆ. ಇವುಗಳು ಯಾವುದೇ ಪದವಿಯನ್ನು ನೀಡಲು ಅಧಿಕಾರ ಹೊಂದಿಲ್ಲ. ವಿದ್ಯಾರ್ಥಿಗಳು ಈ ಕುರಿತು ತಿಳಿಯುವುದು ಅಗತ್ಯವಾಗಿದೆ ಎಂದು ತಿಳಿಸಿದೆ.

ಯುಜಿಸಿ ಕಾಯಿದೆಯ ನಿಬಂಧನೆಗಳಿಗೆ ವಿರುದ್ಧವಾಗಿ ಹಲವಾರು ಸಂಸ್ಥೆಗಳು ಪದವಿಗಳನ್ನು ನೀಡುತ್ತಿರುವುದು ಗಮನಕ್ಕೆ ಬಂದಿದೆ. ಅಂತಹ ವಿಶ್ವವಿದ್ಯಾಲಯಗಳು ನೀಡುವ ಪದವಿಗಳು ಉನ್ನತ ಶಿಕ್ಷಣ ಅಥವಾ ಉದ್ಯೋಗದ ಉದ್ದೇಶಕ್ಕಾಗಿ ಮಾನ್ಯತೆ ಹೊಂದಿರುವುದಿಲ್ಲ. ಈ ವಿಶ್ವವಿದ್ಯಾಲಯಗಳಿಗೆ ಯಾವುದೇ ಪದವಿ ನೀಡಲು ಅಧಿಕಾರವಿಲ್ಲ ಎಂದು ಯುಜಿಸಿ ಕಾರ್ಯದರ್ಶಿ ಮನೀಶ್ ಜೋಶಿ ಹೇಳಿದ್ದಾರೆ. ದೆಹಲಿಯಲ್ಲಿ ಎಂಟು ನಕಲಿ ವಿಶ್ವವಿದ್ಯಾಲಯಗಳು, ಉತ್ತರ ಪ್ರದೇಶದ ನಾಲ್ಕು ಸೇರಿದಂತೆ, ಕರ್ನಾಟಕ, ಮಹಾರಾಷ್ಟ್ರ, ಪುದುಚೇರಿ, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿಯೂ ನಕಲಿ ವಿಶ್ವವಿದ್ಯಾಲಯಗಳಿವೆ ಎಂದು ಯುಜಿಸಿ ಹೇಳಿದೆ.

# ವಜಾಗೊಂಡ ರಾಜಸ್ಥಾನ ಸಚಿವನಿಂದ 'ರೆಡ್ ಡೈರಿ' ಬಿಡುಗಡೆ; ಸಿಎಂ ಪುತ್ರ, ಆರ್‌ಸಿಎ ವಹಿವಾಟು ಉಲ್ಲೇಖ

■ವಿಜಯಸಾಕ್ಷಿ ಸುದ್ದಿ, ಜೈಪುರ:
ರಾಜಸ್ಥಾನ ಸಚಿವ ಸಂಪುಟದಿಂದ ವಜಾಗೊಂಡ ಕಾಂಗ್ರೆಸ್ ಸಚಿವ ರಾಜೇಂದ್ರ ಸಿಂಗ್ ಗುಧಾ ಅವರು ಬುಧವಾರ ಕೆಂಪು ಡೈರಿಯ ಮೂರು ಪುಟಗಳನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ ಸಿಎಂ ಪುತ್ರ ಮತ್ತು ಆರ್‌ಸಿಎ ವಹಿವಾಟುಗಳನ್ನು ಉಲ್ಲೇಖಿಸಲಾಗಿದೆ ಎಂದು ಹೇಳಿದ್ದಾರೆ. ಅಲ್ಲದೇ ಸರ್ಕಾರ ತನ್ನನ್ನು ಬ್ಲಾಕ್ ಮೇಲ್ ಮಾಡುತ್ತಿದೆ ಎಂದು ಆರೋಪಿಸಿದರು.

ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಹಾಗೂ ಇತರ ಸಚಿವರ ವಿರುದ್ಧ ಗುಧಾ ಕೆಲ ದಿನಗಳಿಂದ ವಾಗ್ದಾಳಿ ನಡೆಸುತ್ತಿದ್ದಾರೆ. ಇಂದು ಪತ್ರಿಕಾಗೋಷ್ಠಿಯಲ್ಲಿ ಡೈರಿ ಬಿಡುಗಡೆ ಮಾಡಿದ ಅವರು, ಅದರಲ್ಲಿ ಕಾಂಗ್ರೆಸ್ ಹಿರಿಯ ನಾಯಕ ಮತ್ತು ಮುಖ್ಯಮಂತ್ರಿಯ ಆಪ್ತ ಧರ್ಮೇಂದ್ರ ರಾಥೋಡ್ ಅವರ ಕೈಬರಹವಿದೆ ಎಂದು ಹೇಳಿದ್ದಾರೆ.

ಡೈರಿಯಲ್ಲಿ ರಾಜಸ್ಥಾನ ಕ್ರಿಕೆಟ್ ಸಂಸ್ಥೆಯ(ಆರ್‌ಸಿಎ) ವ್ಯವಹಾರಗಳು ಕೋಡ್ ವರ್ಡ್‌ಗಳಲ್ಲಿವೆ ಮತ್ತು ಮುಖ್ಯಮಂತ್ರಿ ಕಾರ್ಯದರ್ಶಿ ಮತ್ತು ಸಿಎಂ ಪುತ್ರ ವೈಭವ್ ಗೆಹ್ಲೋಟ್ ಅವರ ಬಗ್ಗೆಯೂ ಬರೆಯಲಾಗಿದೆ ಎಂದು ಅವರು ತಿಳಿಸಿದ್ದಾರೆ.

"ವೈಭವ್ ಜಿ ಮತ್ತು ನಾನು ಇಬ್ಬರೂ ಆರ್‌ಸಿಎ ಚುನಾವಣಾ ವೆಚ್ಚದ ಬಗ್ಗೆ ಚರ್ಚಿಸಿದ್ದೇವೆ. ನಿರ್ಧರಿಸಿದ ನಂತರವೂ ಭವಾನಿ ಸಮೋಟಾ ಜನರ ಹಣವನ್ನು ಯಾಕೆ ನೀಡುತ್ತಿಲ್ಲ... .ಭವಾನಿ ಸಮೋಟಾ ಅವರು ಹೆಚ್ಚಿನ ಜನರಿಗೆ ನೀಡಿದ ಭರವಸೆಯನ್ನು ಈಡೇರಿಸಿಲ್ಲ... ಇದು ಸರಿಯಲ್ಲ ಎಂದು ನಾನು ಹೇಳಿದೆ.

# ರಾಜ್ಯಮಟ್ಟದ 3ನೇ ಯುವ ಕಸೋಗಾ ಸಮ್ಮೇಳನ ಆ.5, 6ಕ್ಕೆ




■ವಿಜಯಸಾಕ್ಷಿ ಸುದ್ದಿ, ಗದಗ
ಪ್ರಸೂತಿಶಾಸ್ತ್ರ ಮತ್ತು ಸ್ತ್ರೀರೋಗ ತಜ್ಞ ವೈದ್ಯರ ಸೊಸೈಟಿ ಹಾಗೂ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ ನಗರದ ಜಿಮ್ಸ್ ಸಭಾಂಗಣದಲ್ಲಿ ಆ.5, 6ರಂದು ಬೆಳಗ್ಗೆ 11ಕ್ಕೆ 3ನೇ ರಾಜ್ಯಮಟ್ಟದ ಯುವ ವೈದ್ಯರ ಕಸೋಗಾ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಸಮ್ಮೇಳನದ ಸಂಘಟನೆಯ ಚೇರಮನ್, ಹಿರಿಯ ವೈದ್ಯ ಡಾ.ಶಶಿಧರ ರೇಶ್ಮೆ ಹೇಳಿದರು.

ನಗರದ ಪತ್ರಿಕಾಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ದಿನ ನಡೆಯಲಿರುವ ಈ ವೈದ್ಯಕೀಯ ಸಮ್ಮೇಳನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ, ಜಿಮ್ಸ್ ನಿರ್ದೇಶಕ ಬಸವರಾಜ ಬೊಮ್ಮನಹಳ್ಳಿ, ಜಿಮ್ಸ್ ಪ್ರಾಚಾರ್ಯ ಜಿ.ಎಂ ರಾಜು ಹಾಗೂ ಖ್ಯಾತ ವೈದ್ಯರು ಪಾಲ್ಗೊಳ್ಳುವರು. ವೈದ್ಯಕೀಯ ಸಮ್ಮೇಳನದ ಯಶಸ್ಸಿಗಾಗಿ ಎಲ್ಲ ಕಾರ್ಯಗಳು ಭರದಿಂದ ನಡೆದಿದೆ. ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಪಾಲ್ಗೊಳ್ಳಲಿಚ್ಛಿಸುವ ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು ಎಂದರು.

ರಾಜ್ಯದಿಂದ ಸುಮಾರು 500ಕ್ಕೂ ಹೆಚ್ಚು ವೈದ್ಯರು ಸಮ್ಮೇಳನದಲ್ಲಿ ಪಾಲ್ಗೊಳ್ಳುವರು. ವೈದ್ಯಕೀಯ ಸಮ್ಮೇಳನದಲ್ಲಿ ಖ್ಯಾತ ತಜ್ಞ ವೈದ್ಯರಿಂದ ಪ್ರಬಂಧ ಮಂಡನೆ, ಉಪನ್ಯಾಸ, ಚರ್ಚೆಗಳು ನಡೆಯಲಿವೆ. ವಿಚಾರ ಸಂಕಿರಣದಲ್ಲಿ ಉಪನ್ಯಾಸ, ವೈದ್ಯಕೀಯ ಕೌಶಲವನ್ನು ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಪ್ರಸ್ತುತಪಡಿಸಲಿದ್ದು, ವೈದ್ಯರಿಗೆ, ವೈದ್ಯಕೀಯ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಸೂತಿಶಾಸ್ತ್ರ ಮತ್ತು ಸ್ತ್ರೀರೋಗ ತಜ್ಞ ವೈದ್ಯರ ಸೊಸೈಟಿಯ ಅಧ್ಯಕ್ಷೆ ಡಾ.ಶೃತಿ ಭಾವಿ ಪಾಟೀಲ, ಡಾ.ಅನುಪಮಾ ಪಾಟೀಲ, ಡಾ.ಸುನೀತಾ ಕುರಡಗಿ, ಡಾ.ಸಂತೋಷ ಹುಯಿಲಗೋಳ ಇದ್ದರು.

## ಉದ್ಯೋಗ ಖಾತ್ರಿ ಯೋಜನೆಯ ವಿಶೇಷ ಸಭೆಯಲ್ಲಿ ಎಡಿಪಿಸಿ ಕಿರಣಕುಮಾರ

# ಮಹಿಳೆಯರ ಸ್ವಾವಲಂಬಿ ಬದುಕಿಗೆ ನರೇಗಾ ಆಸರೆ






■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ
ಉದ್ಯೋಗ ಖಾತ್ರಿ ಯೋಜನೆಯು ಗ್ರಾಮೀಣ ಮಹಿಳೆಯರ ಜೀವನ ಹಸನಾಗಿಸಲು ಪ್ರಮುಖ ಪಾತ್ರ ವಹಿಸುತ್ತಿದ್ದು, ಯೋಜನೆಯ ಸದ್ಬಳಕೆಯಲ್ಲಿ ಎಲ್ಲರ ಸಹಭಾಗಿತ್ವ, ಸಹಕಾರ ಅತ್ಯಗತ್ಯವಾಗಿದೆ ಎಂದು ಎಡಿಪಿಸಿ ಕಿರಣಕುಮಾರ ಎಸ್ ಎಚ್ ಹೇಳಿದರು.

ತಾಲೂಕಿನ ಶಾಂತಗೇರಿ ಗ್ರಾಮ ಪಂಚಾಯಿತಿಯಲ್ಲಿ ಬುಧವಾರ ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ ಹೆಚ್ಚಿಸುವ ಕುರಿತು ಮಹಿಳಾ ಸ್ವ-ಸಹಾಯ ಸಂಘಗಳ ಸದಸ್ಯರಿಗೆ ಹಮ್ಮಿಕೊಂಡಿದ್ದ ಉದ್ಯೋಗ ಖಾತ್ರಿ ಯೋಜನೆಯ ವಿಶೇಷ ಸಭೆಯಲ್ಲಿ ಅವರು ಮಾತನಾಡಿದರು.

ಉದ್ಯೋಗ ಖಾತ್ರಿ ಯೋಜನೆಯಡಿ ನಡೆಯುವ ಕಾಮಗಾರಿಗಳಲ್ಲಿ ಮಹಿಳಾ ಕಾರ್ಮಿಕರ ಸಂಖ್ಯೆಯನ್ನು ವೃದ್ಧಿಸಿ, ಅವರಲ್ಲಿ ಸ್ವಾವಲಂಬಿ ಮನೋಭಾವ ಬೆಳೆಸಲು ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ನರೇಗಾ ಯೋಜನೆಯ ತಾ ಪಂ ಐಇಸಿ ಸಂಯೋಜಕ ಮಂಜುನಾಥ ಹಳ್ಳದ ಮಾತನಾಡಿ, ತಾಲೂಕಿನಲ್ಲಿಯೇ ಶಾಂತಗೇರಿ ಗ್ರಾಮ ಪಂಚಾಯಿತಿಯಲ್ಲಿ ಅತೀ ಕಡಿಮೆ ಮಹಿಳಾ ಪಾಲ್ಗೊಳ್ಳುವಿಕೆಯಿದೆ ಎಂದು ತಿಳಿಸಿ, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸದಲ್ಲಿ ಪಾಲ್ಗೊಳ್ಳುವಂತೆ ಸೂಚಿಸಿದರು. ತಾಂತ್ರಿಕ ಸಹಾಯಕ ಉಮೇಶ ಜಕ್ಕಲಿ, ಬಿಎಫ್‌ಟಿ ಜ್ಯೋತಿ ವಡ್ಡರ, ಎಚ್ ಎಸ್ ಪವಾಡಿಗೌಡ್ರ ಮಾತನಾಡಿದರು.

ಈ ಸಂದರ್ಭದಲ್ಲಿ ಗ್ರಾಮ ಕಾಯಕ ಮಿತ್ರ ಶಿವಗಂಗಾ ಹುಲ್ಲಣ್ಣವರ, ಪಂಚಾಯತ್ ಸಿಬ್ಬಂದಿಗಳಾದ ಶಾಂತಾ ಬಾಗೂರು, ಮರಿಯಪ್ಪ ಮಾದರ ಮುಂತಾದವರು ಇದ್ದರು.

### ಸ್ಥಳದಲ್ಲಿಯೇ ನಮೂನೆ 6 ಸಂಗ್ರಹ

ಈ ವೇಳೆ, ಮಹಿಳೆಯರು ಕೆಲಸಕ್ಕೆ ಬರುವ ಭರವಸೆ ಮೂಡಿಸಿ, ಸ್ಥಳದಲ್ಲಿಯೇ ನಮೂನೆ 6ರನ್ನು ತುಂಬಿಸಿ, ಎಡಿಪಿಸಿ ಅವರ ಮೂಲಕ ಗ್ರಾಮ ಪಂಚಾಯತ್‌ಗೆ ಕೊಡಿಸಲಾಯಿತು. ಫಲಾನುಭವಿಗಳಿಂದ ನಮೂನೆ 6ನ್ನು ಸ್ವೀಕರಿಸಿದ ಎಡಿಪಿಸಿ ಅವರು, ಮುಂದಿನ 15 ದಿನದೊಳಗೆ ಕೆಲಸ ಒದಗಿಸುವುದಾಗಿ ಭರವಸೆ ನೀಡಿದರು. ಡಿಇಓ ಪ್ರಕಾಶ ನರೇಗಲ್ ಕಾರ್ಯಕ್ರಮ ನೆರವೇರಿಸಿದರು.

# ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುವ ಮೊದಲು ನಿಮ್ಮ ಮತ್ತು ಬಿಜೆಪಿಯ ನಿಲುವನ್ನು ಸ್ಪಷ್ಟಪಡಿಸಿ: ಮೋದಿಗೆ ಸಿದ್ದು ಸವಾಲ್

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು
ಕರ್ನಾಟಕದ ಮಾದರಿ ಆಡಳಿತ ಇಡೀ ದೇಶಕ್ಕೆ ಬೇಕು ಎಂದು ಪ್ರತಿಪಾದಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುವ ಮೊದಲು ನಿಮ್ಮ ಮತ್ತು ಬಿಜೆಪಿಯ ನಿಲುವನ್ನು ಸ್ಪಷ್ಟಪಡಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಶ್ನಿಸಿದ್ದಾರೆ.

ಕರ್ನಾಟಕದ ಆಡಳಿತಾರೂಢ ಕಾಂಗ್ರೆಸ್ ಸ್ವಾರ್ಥಕ್ಕಾಗಿ ರಾಜ್ಯದ ಬೊಕ್ಕಸವನ್ನು ಖಾಲಿ ಮಾಡುತ್ತಿದೆ ಎಂದು ಪ್ರಧಾನಿ ಮೋದಿ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕೇಂದ್ರದ ಎನ್ ಡಿಎ ಸರ್ಕಾರ ಮತ್ತು ಬಿಜೆಪಿ ಆಡಳಿತವಿರುವ ಕೆಲವು ರಾಜ್ಯಗಳಲ್ಲಿ ಘೋಷಿಸಿದ ಕೆಲವು 'ಉಚಿತ ಯೋಜನೆಗಳನ್ನು' ಎತ್ತಿ ತೋರಿಸಿದ್ದು ಈ ವಿಚಾರದಲ್ಲಿ ದ್ವಂದ್ವ ನಿಲುವೇಕೆ ಎಂದು ಪ್ರಧಾನಿಯನ್ನು ಪ್ರಶ್ನಿಸಿದರು. ಕಾಂಗ್ರೆಸ್ ಗ್ಯಾರಂಟಿ ಘೋಷಣೆಗಳನ್ನು ನೀಡುವ ಮೂಲಕ ದಕ್ಷಿಣ ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ಕಾಂಗ್ರೆಸ್ ಯಶಸ್ವಿಯಾಗಿದೆ. ಆದರೆ ಈ ಪ್ರಕ್ರಿಯೆಯಲ್ಲಿ ಅದು ಜನರ ಭವಿಷ್ಯವನ್ನು ಅಪಾಯಕ್ಕೆ ಸಿಲುಕಿಸಿದೆ. ಇನ್ನು ಸಿದ್ದರಾಮಯ್ಯ ಸರ್ಕಾರ ರಾಜ್ಯದ ಬೊಕ್ಕಸ ಖಾಲಿಯಾಗಿದೆ ಮತ್ತು ಅಭಿವೃದ್ಧಿಗೆ ಹಣವಿಲ್ಲ ಎಂದು ಒಪ್ಪಿಕೊಂಡಿದೆ ಎಂದು ಪ್ರಧಾನಿ ಆರೋಪಿಸಿದ್ದರು.

ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಪ್ರಕ್ರಿಯೆಯ ಮಧ್ಯೆ ಕರ್ನಾಟಕದ ಹಣಕಾಸಿನ ಬಗ್ಗೆ ಕಾಳಜಿ ವಹಿಸಿದ್ದಕ್ಕಾಗಿ ಪ್ರಧಾನಿ @ಟಿಚಿಡಿಜಟಿಜಡಿಚಿಟಠಜು ಅವರಿಗೆ ಧನ್ಯವಾದಗಳು. ಇದು ನಿಮ್ಮ ವೈಯಕ್ತಿಕ ಅಭಿಪ್ರಾಯವೇ, ಭಾರತದ ಪ್ರಧಾನ ಮಂತ್ರಿಯಾಗಿ ಅಭಿಪ್ರಾಯವೇ ಅಥವಾ ನಿಮ್ಮ ಪಕ್ಷದ ಅಭಿಪ್ರಾಯ? ಎಂಬುದನ್ನು ದಯವಿಟ್ಟು ಸ್ಪಷ್ಟಪಡಿಸಿ ಎಂದು ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ.

ಗ್ಯಾರಂಟಿ ಯೋಜನೆಗಳನ್ನು ನಮ್ಮ ಮುಖ್ಯ ಅಜೆಂಡಾವಾಗಿಟ್ಟುಕೊಂಡು ಮುಂದಿನ ಲೋಕಸಭಾ ಚುನಾವಣೆಯನ್ನು ಎದುರಿಸಲು ನಾವು ಸಿದ್ಧರಿದ್ದೇವೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

## 'ಪುಲಿಗೆರೆ ಪೌರ್ಣಿಮೆ' ಕಾರ್ಯಕ್ರಮದ 21ನೇ ಸಂಚಿಕೆಯಲ್ಲಿ ಸಿ ಎಸ್ ಹಿರೇಮಠ ಅಭಿಮತ

# ನುಡಿದಂತೆ ನಡೆದ ಶರಣರು ಸಮಾಜದ ದೀವಿಗೆ



> ಲೋಕ ಕಲ್ಯಾಣಕ್ಕಾಗಿ ಅವತರಿಸಿದ ಬಾಲಲೀಲ ಮಹಾಂತ ಶಿವಯೋಗಿಗಳು ಹಲವಾರು ಪವಾಡ, ಧರ್ಮಜಾಗೃತಿಗಳ ಮೂಲಕ ಜನರ ಸಂಕಷ್ಟಗಳನ್ನು ದೂರಗೊಳಿಸುತ್ತಾ ಬದುಕಿನ ಮೌಲ್ಯಗಳನ್ನು ತೋರಿಸಿದ್ದಾರೆ. ನುಡಿದಂತೆ ನಡೆದ ಶರಣರು ಸಮಾಜದ ಬೆಳಕಾಗಿದ್ದಾರೆ.
>
> – ಸಿ ಎಸ್ ಹಿರೇಮಠ.
> ಉಪನ್ಯಾಸಕರು.

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ
ಮನುಕುಲದ ಉದ್ಧಾರಕ್ಕಾಗಿ ತಮ್ಮನ್ನೇ ಸಮರ್ಪಿಸಿಕೊಂಡ ಶರಣರು, ಸಂತರು, ಮಹಾತ್ಮರು ನೀಡಿದ ಜೀವನಾಮೃತ ಸಂದೇಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶ್ರೀಮತಿ ಕಮಲಮ್ಮ ಮತ್ತು ಶ್ರೀ ವೆಂಕಪ್ಪ ಎಂ ಅಗಡಿ ಪಿಯು ಕಾಲೇಜಿನ ಉಪನ್ಯಾಸಕ ಸಿ ಎಸ್ ಹಿರೇಮಠ ಹೇಳಿದರು.

ಅವರು ಮಂಗಳವಾರ ಪಟ್ಟಣದ ಶ್ರೀ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮಿಟಿ ವತಿಯಿಂದ ಸೋಮೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡ 'ಪುಲಿಗೆರೆ ಪೌರ್ಣಿಮೆ' ಕಾರ್ಯಕ್ರಮದ 21ನೇ ಸಂಚಿಕೆಯಲ್ಲಿ ಮುಳಗುಂದದ ಬಾಲಲೀಲಾ ಮಹಾಂತಶಿವಯೋಗಿಗಳ ಕುರಿತ ಉಪನ್ಯಾಸ ನೀಡಿ ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಡಾ. ಪಿ ಡಿ ತೆ-ಣಟದ, ಮುಂದಿನ ಪೀಳಿಗೆಗೆ ಸಾಂಸ್ಕೃತಿಕತೆ, ಧಾರ್ಮಿಕತೆ ಮುಂದುವರೆಸಲು ಇಂತಹ ಧರ್ಮಜಾಗೃತಿ ಕಾರ್ಯಕ್ರಮಗಳು, ಸತ್ಸಂಗಗಳು ಅವಶ್ಯ. ಈ ದಿಶೆಯಲ್ಲಿ ಶ್ರೀ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮಿಟಿ ಉತ್ತಮ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ. ಜನರು ತಮ್ಮ ಬದುಕಿನ ಒತ್ತಡದ ನಿವಾರಣೆಗಾಗಿ, ಉತ್ತಮ ಬದುಕಿಗಾಗಿ ಇಂತಹ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೇವಸ್ಥಾನ ಭಕ್ತರ ಕಮಿಟಿಯ ಅಧ್ಯಕ್ಷ ಚಂಬಣ್ಣ ಬಾಳಿಕಾಯಿ, ಪುರಸಭೆ ಮಾಜಿ ಉಪಾಧ್ಯಕ್ಷ ಗುರುಪುತ್ರ ಮೆಡ್ಲೇರಿ, ಟ್ರಸ್ಟ್ ಕಮಿಟಿ ಸದಸ್ಯೆ ಸುಮಿತ್ರಾ ಚೋಟಗಲ್ ಮಾತನಾಡಿದರು. ಪತ್ರಕರ್ತರ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಕಳಸಾಪುರ, ಶೇಖಣ್ಣ ಹುರಕಡ್ಲಿ, ಸೇವಾಕರ್ತ ರಾಮಣ್ಣ ಶಿರಹಟ್ಟಿ, ಸುರೇಶ ರಾಚನಾಯಕ, ಡಿ ಬಿ ಬಳಿಗಾರ, ಸಿದ್ದನಗೌಡ ಬಳ್ಳೊಳ್ಳಿ, ನೀಲಪ್ಪ ಕರ್ಜಕಣ್ಣವರ, ಬಸವರಾಜ ಮೆಣಸಿನಕಾಯಿ, ಗೋಪಾಲ ನಾಯಕ, ಎನ್ ಆರ್ ಸಾತಪುತೆ, ಪಾಟೀಲ ವಕೀಲರು, ಎಸ್ ವಿ ಕನೋಜ, ನಿಂಗಪ್ಪ ಗೊರವರ, ನಿಂಗಪ್ಪ ತಹಸೀಲ್ದಾರ, ಮಲ್ಲೇಶಪ್ಪ ಕಣವಿ, ಸಾತಣ್ಣವರ, ಆರ್ ಪಿ ರಾಯಚೂರ, ರವಿ ಸುತಾರ, ಮಂಜುನಾಥ ಜಲ್ಲಿ, ಸೋಮಪ್ಪ ಅಣ್ಣಿಗೇರಿ, ಈಶ್ವರಪ್ಪ ಕುಂಬಾರ, ಕಾಶಪ್ಪ ಮುಳಗುಂದ ಇದ್ದರು.

ಶಿಕ್ಷಕ ಎಲ್ ಆರ್ ಮಲಸಮುದ್ರ, ಪೂರ್ಣಾಜಿ ಖರಾಟೆ, ಚಂದ್ರು ನೇಕಾರ, ಕು.ಸ್ನೇಹಾ ಹೊಟ್ಟಿ ನಿರ್ವಹಿಸಿದರು.

# ದಲಿತರ ಅನುದಾನವನ್ನು ದುರ್ಬಳಕೆ ಮಾಡುತ್ತಿರುವುದು ಖಂಡನೀಯ



■ವಿಜಯಸಾಕ್ಷಿ ಸುದ್ದಿ, ಗದಗ
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅನುದಾನವನ್ನು ದುರ್ಬಳಕೆ ಮಾಡುತ್ತಿರುವ ಸರ್ಕಾರದ ನಡೆಯನ್ನು ಗದಗ ಜಿಲ್ಲಾ ಎಸ್ಸಿ/ಎಸ್ಟಿ ದೌರ್ಜನ್ಯ ನಿಯಂತ್ರಣ ಸಮಿತಿ ಸದಸ್ಯ ಸುರೇಶ ವಾಯ್ ಚಲವಾದಿ ಖಂಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಜನತೆಗೆ ನೀಡಿರುವ 5 ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪ.ಜಾತಿ/ಪ.ಪಂಗಡದ ಅಭಿವೃದ್ಧಿಗಾಗಿ ಮೀಸಲಿರುವ ಗಿರಿಜನ ಉಪಯೋಜನೆಯ ಖಇಖಕ/ಖಖಿ ಅನುದಾನದ 11 ಸಾವಿರ ಕೋಟಿ ರೂ. ಮೊತ್ತವನ್ನು ಗ್ಯಾರಂಟಿ ಯೋಜನೆಗೆ ಬಳಸಿಕೊಂಡು, ತಮ್ಮ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳಲು ದಲಿತರನ್ನು ಹರಕೆಯ ಕುರಿಗಳಂತೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ.

ಕಳೆದ 70 ವರ್ಷಗಳಿಂದ ದಲಿತರನ್ನು ಹೀಗೆ ನಂಬಿಸುತ್ತಾ ರಾಜಕೀಯ ಮೆಟ್ಟಿಲುಗಳನ್ನಾಗಿ ಬಳಸಿಕೊಂಡ ಕಾಂಗ್ರೆಸ್ ದಲಿತರ ಅಭಿವೃದ್ಧಿ ವಿಷಯದಲ್ಲಿ ಶೂನ್ಯ ಸಾಧನೆ ಸಾಧಿಸಿದೆ. ಕಳೆದ 2018ರಲ್ಲಿಯೂ ಕಾಂಗ್ರೆಸ್ ರೈತರ ಸಾಲ ಮನ್ನಾ ಮಾಡಲು ಎಸ್ಸಿ, ಎಸ್ಟಿ, ಟಿಎಸ್ಪಿ ಗಿರಿಜನ ಉಪಯೋಜನೆಯ ಒಟ್ಟು 929.41 ಕೋಟಿ ಅನುದಾನವನ್ನು ಬಳಕೆ ಮಾಡಿಕೊಂಡಿದೆ. ಅಷ್ಟೇ ಅಲ್ಲದೆ, ಚುನಾವಣಾ ಕರ್ತವ್ಯಕ್ಕೆ ಪೋಲೀಸರನ್ನು ನಿಯೋಜಿಸುವದಕ್ಕಾಗಿ 10 ಕೋಟಿ ದಲಿತರ ಅನುದಾನವನ್ನು ದುರ್ಬಳಕೆ ಮಾಡಿಕೊಂಡು ದಲಿತರಿಗೆ ವಂಚಿಸಿರುವದು ಖೇದಕರ ಸಂಗತಿ.

ಅಧಿಕಾರದ ಗದ್ದುಗೆ ಏರಿದ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕೆಲವೇ ತಿಂಗಳಲ್ಲಿ ದಲಿತ ವಿರೋಧಿ ನೀತಿಯನ್ನ ಅನುಸರಿಸುತ್ತ ತನ್ನ ಅಸಲಿ ಮುಖವಾಡವನ್ನು ಪ್ರದರ್ಶಿಸಿದೆ. ಕೂಡಲೇ ರಾಜ್ಯ ಸರ್ಕಾರ ದಲಿತರ ಅನುದಾನವನ್ನು ಬೇರೆ ಯೋಜನೆಗಳಿಗೆ ಬಳಸುವದನ್ನು ನಿಲ್ಲಿಸಿ, ದಲಿತರ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಇಲ್ಲದೇ ಹೋದಲ್ಲಿ ಸರ್ಕಾರದ ವಿರುದ್ಧ ರಾಜ್ಯದಾದ್ಯಂತ ಹೋರಾಟ ಮಾಡಲಾಗುವದೆಂದು ಎಚ್ಚರಿಸಿದ್ದಾರೆ.

# ಶಿಕ್ಷಕರ ವೃತ್ತಿ ಎಲ್ಲರಿಗೂ ಸಿಗದು



■ವಿಜಯಸಾಕ್ಷಿ ಸುದ್ದಿ, ಮುಳಗುಂದ
ಶಿಕ್ಷಕರ ವೃತ್ತಿ ಅತ್ಯಂತ ಶ್ರೇಷ್ಠವಾದ ವೃತ್ತಿಯಾಗಿದೆ ಎಂದು ಗದಗ ಗ್ರಾಮೀಣ ಕ್ಷೇತ್ರ ಸಂಪನ್ಮೂಲ ಅಧಿಕಾರಿ ಜೆ ಎ ಭಾವಿಕಟ್ಟಿ ಹೇಳಿದರು.

ಅವರು ಪಟ್ಟಣದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಚಿಂಚಲಿ(ವಡ್ಡರಗೇರಿ) ಶಾಲಾ ಪ್ರಧಾನ ಗುರು ಸಿ ಎಸ್ ಬಾರಿಗಿಡದ ನಿವೃತ್ತಿ ಕಾರ್ಯಕ್ರಮದಲ್ಲಿ ಮಾತನಾಡಿ, ಶಿಕ್ಷಕರ ವೃತ್ತಿ ಎಲ್ಲರಿಗೂ ದೊರೆಯುವುದಿಲ್ಲ. ಶಿಕ್ಷಕ ವೃತ್ತಿಯಷ್ಟು ತೃಪ್ತಿದಾಯಕ ಹುದ್ದೆ ಯಾವುದೂ ಇಲ್ಲ. ಇಂತ ಹುದ್ದೆಯಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ ಸಿ ಎಸ್ ಬಾರಿಗಿಡದ ಅವರ ನಿವೃತ್ತ ಜೀವನವು ಸುಖಮಯವಾಗಿರಲಿ ಎಂದರು.

ಗದಗ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ ವಿ ನಡುವಿನಮನಿ, ಶಾಲಾ ಪ್ರಭಾರಿ ಪ್ರಧಾನ ಗುರು ಎಸ್ ಎಂ ಉಜ್ಜಣ್ಣವರ, ಡಿ ಎಸ್ ತಳವಾರ, ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ದುರಗಪ್ಪ ವಡ್ಡರ, ಎಂ ಎಂ ಮೆಗಲಮನಿ, ಬಸವರಾಜೇಶ್ವರಿ ಮುಂಡರಗಿ, ಎಸ್ ಎಸ್ ತೆ-ಣಟರ, ಆರ್ ಎಚ್ ಪಾರ್ವತಿ, ಯು ಎಂ ಸೂರಬಟ್ಟನವರ ಹಾಗೂ ಎಸ್‌ಡಿಎಂಸಿ ಸದಸ್ಯರು ಇದ್ದರು.

## ಶ್ರೀದೇವರ ದಾಸಿಮಯ್ಯನವರ ವಚನವಾಚನ ಕಾರ್ಯಕ್ರಮದಲ್ಲಿ ಶ್ರೀನಿವಾಸ ಹುಬ್ಬಳ್ಳಿ ಅಭಿಪ್ರಾಯ

# ದಾಸಿಮಯ್ಯನವರ ವಚನಗಳು ಜನಮಾನಸಕ್ಕೆ ಹತ್ತಿರವಾಗಿವೆ



> ಸಾಮಾನ್ಯ ನೇಕಾರನಾಗಿ, ನೇಕಾರಿಕೆಯ ವೃತ್ತಿಯೊಂದಿಗೆ ವಚನ ಸಾಹಿತ್ಯವನ್ನು ರಾಮನಾಥ ಎಂಬ ಕಾವ್ಯನಾಮದಡಿ ದೇವರದಾಸಿಮಯ್ಯನವರು ತಮ್ಮ ವಚನಗಳನ್ನು ರಚಿಸಿದರು. ಮುದನೂರು ಗ್ರಾಮದ ಶ್ರೀ ರಾಮನಾಥ ದೇವರ ದಾಸಿಮಯ್ಯನವರ ಆರಾಧ್ಯ ದೈವ. ಈ ದಿಸೆಯಲ್ಲಿ ಕೇವಲ ನೇಕಾರ ಸಮಾಜ ಮಾತ್ರವಲ್ಲದೇ ಎಲ್ಲರೂ ಈ ವಚನಗಳನ್ನು ಪ್ರಚುರಪಡಿಸುವಲ್ಲಿ ಶ್ರಮಿಸುವುದು ಅಗತ್ಯವಾಗಿದೆ.
>
> – ಶ್ರೀನಿವಾಸ ಹುಬ್ಬಳ್ಳಿ.
> ದೇವಾಂಗ ಸಮಾಜದ ಮುಖಂಡರು.

■ವಿಜಯಸಾಕ್ಷಿ ಸುದ್ದಿ, ಗದಗ
ವಚನಕಾರ ದೇವರ ದಾಸಿಮಯ್ಯನವರು ವಚನ ಸಾಹಿತ್ಯಕ್ಕೆ ಭದ್ರ ಬುನಾದಿ ಹಾಕಿದ್ದಾರೆ. ಅಂದಿನ ಕಾಲದ ಜನಜೀವನ, ನಡುವಳಿಕೆಗಳು, ಟೀಕೆ-ಟಿಪ್ಪಣಿಗಳನ್ನು ನವಿರಾಗಿ ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ವಿವರಿಸಿ, ವಚನ ಸಾಹಿತ್ಯಕ್ಕೆ ಮೆರಗು ನೀಡಿದ್ದಾರೆ ಎಂದು ಗದಗ ಜಿಲ್ಲಾ ದೇವಾಂಗ ಸಮಾಜದ ಮುಖಂಡ ಶ್ರೀನಿವಾಸ ಹುಬ್ಬಳ್ಳಿ ಅಭಿಪ್ರಾಯಪಟ್ಟರು.

ಬೆಟಗೇರಿ ನರಸಾಪೂರ ನಾಕಾ ಬಳಿಯ ದೇವರ ದಾಸಿಮಯ್ಯನವರ ಪುತ್ಥಳಿಯ ಬಳಿ ಮಂಗಳವಾರ ಜರುಗಿದ ವಚನಪಿತಾಮಹ ಶ್ರೀದೇವರ ದಾಸಿಮಯ್ಯನವರ 6ನೇ ವಚನವಾಚನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಹಲವಾರು ಜನ ಶರಣರು ವಚನ ಸಾಹಿತ್ಯ ಹೆಮ್ಮರವಾಗಿ ಬೆಳೆಯುವಂತೆ ಮಾಡಿದರು. ಇಂದಿಗೂ ದೇವರ ದಾಸಿಮಯ್ಯನವರ ವಚನಗಳು ಜನಮಾನಸಕ್ಕೆ ಹತ್ತಿರವಾಗಿವೆ ಎಂದರು.

ನಗರಸಭೆ ಮಾಜಿ ಉಪಾಧ್ಯಕ್ಷ ಅಶೋಕ ಬಣ್ಣದ ಮಾತನಾಡಿ, ಪ್ರತಿ ತಿಂಗಳ ಹುಣ್ಣಿಮೆಯ ದಿನ ನಡೆಯುವ ಕಾರ್ಯಕ್ರಮದಲ್ಲಿ ದಾಸಿಮಯ್ಯನವರ ವಚನವನ್ನು ಪ್ರಸ್ತುತಪಡಿಸುವುದರ ಜೊತೆಗೆ ಹುಣ್ಣಿಮೆಗೆ ಒಂದು ವಚನದಂತೆ ಈ ಭಾಗದಲ್ಲಿ ದೇವರದಾಸಿಮಯ್ಯನವರ ಪೂಜೆಯೊಂದಿಗೆ ಅವರ ಸ್ಮರಣೆ ಮಾಡುತ್ತಿರುವುದು ಶ್ಲಾಘನೀಯ. ಗದಗ ಜಿಲ್ಲಾ ದೇವಾಂಗ ಸಮಾಜ ಬಾಂಧವರು ಹಾಗೂ ನೇಕಾರ ಬಾಂಧವರು ಈ ಕಾರ್ಯಕ್ರಮಕ್ಕೆ ಶೋಭೆ ತರುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದರು.

ದೇವರ ದಾಸಿಮಯ್ಯನವರ ವಚನ ವಾಚನ ಕಾರ್ಯಕ್ರಮದಲ್ಲಿ ನಿವೃತ್ತ ವಿಷಯ ಪರಿವೀಕ್ಷಕರಾದ ರಾಮಚಂದ್ರ ಹುಬ್ಬಳ್ಳಿ ಅವರು ವಚನ ಪಿತಾಮಹ ದೇವರ ದಾಸಿಮಯ್ಯನವರ ವಚನವನ್ನು ವಾಚಿಸಿ, ವಚನದ ಸಾರವನ್ನು ಎಲ್ಲರೂ ಅರಿತು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ದೇವಾಂಗ ಸಮಾಜದ ಅಧ್ಯಕ್ಷ ದಶರಥ ಕೊಳ್ಳಿ ಸ್ವಾಗತಿಸಿದರು. ದೇವರ ದಾಸಿಮಯ್ಯ ಪ್ರತಿಷ್ಠಾನ ಸಮಿತಿ ಅಧ್ಯಕ್ಷ ಅನಿಲ ಗಡ್ಡಿ ಪೂಜೆ ನೆರವೇರಿಸಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಗಾಯತ್ರಿ ಪಡುಡಿ, ಹಿರಿಯರಾದ ಎಸ್ ಕೆ ಹುಬ್ಬಳ್ಳಿ, ವಿಶ್ವನಾಥ ಹುಬ್ಬಳ್ಳಿ, ಚಿನ್ನಪ್ಪ ನೆಗಳೂರ, ಸಿದ್ದು ಪಿಂಡಕೂರ, ಮೈಲಾರಿ ತುರಕಾಣಿ, ವಿನಾಯಕ ನೆಗಳೂರ, ಬಸವರಾಜ ಮುದಗಲ್ಲ, ಈರಣ್ಣ ಗೌರೋಜಿ, ಸಂಕಣ್ಣ ಹಾದಿಮನಿ, ವೀರಭದ್ರಪ್ಪ ದೇವದರ, ಚಿದಾನಂದ ಕಾಲವಾಡ, ಕಿಶೋರ ಹಾದಿಮನಿ, ಕನಕಾನವರ, ಸುನೀಲ ಬೆಲ್ಲದ, ಹುಚ್ಚಪ್ಪ ಭಜಂತ್ರಿ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka